# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 Volume:01 • ಸಂಚಿಕೆ:313 Issue:313 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 14.05.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
60,000
HAMPI TIMES E-PAPER READES
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201


# ಉಜ್ಜಯಿನಿ ಶ್ರೀ ಮರುಳಸಿದ್ಧೇಶ್ವರ ಶಿಖರಕ್ಕೆ ತೈಲಾಭಿಷೇಕ

## ಜರ್ಮಲಿ ಪಾಳೆಯಗಾರರ ವಂಶಸ್ಥರು ತಂದ ತೈಲದಿಂದ ಮೊದಲ ಅಭಿಷೇಕ। ಮುಗಿಲು ಮುಟ್ಟಿದ ಜೈಕಾರ, ಹರ್ಷೋದ್ಗಾರ



■ **ಹಂಪಿ ಟೈಮ್ಸ್ ಕೊಟ್ಟೂರು**

ರಾಷ್ಟ್ರದಲ್ಲಿ ವಿಶಿಷ್ಟ ಮತ್ತು ವೈವಿಧ್ಯಮಯ ಶಿಲ್ಪಕಲೆಗಳ ತಾಣವಾಗಿರುವ ಕೊಟ್ಟೂರು ತಾಲೂಕಿನ ಶ್ರೀ ಉಜ್ಜಿನಿ ಸದ್ಧರ್ಮ ಸಿಂಹಾಸನ ಪೀಠದ ಕ್ಷೇತ್ರನಾಥ ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ 'ಶಿಖರಕ್ಕೆ ತೈಲಾಭಿಷೇಕ" ಸೋಮವಾರ ಸಂಜೆ 5.50ಕ್ಕೆ ಅಸಂಖ್ಯಾತ ಭಕ್ತಸ್ತೋಮದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಇದಕ್ಕೂ ಮುನ್ನ ಐತಿಹಾಸಿಕ ಮತ್ತು ಧಾರ್ಮಿಕ ಪರಂಪರೆಯಂತೆ ಜರ್ಮಲಿ ಪಾಳೆಯಗಾರ ವಂಶಸ್ಥರು ಬಸವರಾಜ ನಾಯಕ, ನಾಗರಾಜ್ ನಾಯಕ ಮತ್ತಿತರರು ತೈಲ ತುಂಬಿದ ಕುಂಭಕ್ಕೆ ಪೂಜೆಮಾಡಿ, ಜರ್ಮಲಿಯಿಂದ ಪಾದಯಾತ್ರೆ ಮೂಲಕ ಮಧ್ಯಾಹ್ನ 2 ಗಂಟೆಗೆ ಉಜ್ಜಿನಿಗೆ ತಂದು ಪಾದಗಟ್ಟೆ ಬಳಿ ಶ್ರೀಸ್ವಾಮಿಯ ಪುರೋಹಿತರಿಗೆ ಅರ್ಪಿಸಿದರು.

ಪುರೋಹಿತರು ತೈಲ ತುಂಬಿದ ಕುಂಭವನ್ನು ಗೌರವ ಪೂರ್ವಕವಾಗಿ ಅದ್ದೂರಿ ಮೆರವಣಿಗೆಯೊಂದಿಗೆ ಸದ್ಧರ್ಮ ಪೀಠದ ಜಗದ್ಗುರುಗಳಿಗೆ ಅರ್ಪಿಸಿದರು, ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ತೈಲತುಂಬಿದ ಕುಂಭಗಳಿಗೆ ಹಿಂದಿನಿಂದ ನಡೆದು ಬಂದ ಧಾರ್ಮಿಕ ಪರಂಪರೆಯಂತೆ ಅಶೀರ್ವದಿಸಿ, ಶ್ರೀ ಮರುಳಸಿದ್ಧೇಶ್ವರ ಸ್ವಾಮಿಯ ಶಿಖರ ಅಭಿಷೇಕಕ್ಕೆ ಸೂಚನೆ ನೀಡಿದರು.

ಪ್ರತಿ ವರ್ಷದ ಧಾರ್ಮಿಕ ಆಚರಣೆಯಂತೆ ಜರ್ಮಲಿ ಪಾಳೇಗಾರ ವಂಶಸ್ಥರಿಂದ ಬಂದ ತೈಲದಿಂದ ಶ್ರೀ ಮರುಳಸಿದ್ಧೇಶ್ವರ ಸ್ವಾಮಿ 'ಶಿಖರಕ್ಕೆ ಅಭಿಷೇಕ" ನೆರವೇರುತ್ತಿದ್ದಂತೆ ನೆರದ ಭಕ್ತಗಣವು ಶ್ರೀಸ್ವಾಮಿಗೆ ಹಾಕಿದ ಹರ್ಷೋದ್ಗಾರದ ಜಯಕಾರ ಮುಗಿಲು ಮಟ್ಟಿತು.

ಜರ್ಮಲಿ ತೈಲವನ್ನು ಶಿಖರಕ್ಕೆ ಎರೆಯುತ್ತಿದ್ದಂತೆ ಶ್ರೀ ಸ್ವಾಮಿಯ ಭಕ್ತರು ತಮ್ಮ ಭಕ್ತಿಗನುಗುಣವಾಗಿ ಎಣ್ಣೆಯನ್ನು ಎರೆದು ಭಕ್ತಿ ಸಮರ್ಪಿಸಿದರು ಹಾಗೆ ಶಿಖರಕ್ಕೆ ಸಂಪೂರ್ಣ ತೈಲಾಭಿಷೇಕ ದೃಶ್ಯವನ್ನು ಭಕ್ತರು ವೀಕ್ಷಿಸಿ ಕಣ್ತುಂಬಿಕೊಂಡರು, ಇದರೊಟ್ಟಿಗೆ ಶಿಖರಕ್ಕೆ ಬಾಳೆ ಹಣ್ಣು, ಉತ್ತುತ್ತಿ ಎಸೆದು ಭಕ್ತರು ಭಕ್ತಿ ಸಮರ್ಪಿಸಿದರು.

ಶಿಖರಕ್ಕೆ ಎಣ್ಣೆಯನ್ನು ಮಜ್ಜನಗೊಳಿಸುವ ಪ್ರಕ್ರಿಯೆ ಸುಮಾರು ಒಂದು ತಾಸುಗಳ ಕಾಲ ನಿರಂತರವಾಗಿ ನೆರವೇರಿತು, ಶಿಖರಕ್ಕೆ ತೈಲ ಮಜ್ಜನ ಮಾಡುವ ಆಯಗಾರರು ಸಂಪೂರ್ಣ ಎಣ್ಣೆಯಿಂದ ಒದ್ದೆಯಾಗಿದ್ದರು, ಜಾಣ್ಮೆ ಮತ್ತು ಜಾಗೃತಿಯಿಂದ ಶಿಖರದ ಮೇಲೇರಿ ಶಿಖರಕ್ಕೆ ತೈಲಾಭಿಷೇಕ ಕಾರ್ಯದಲ್ಲಿ ತೊಡಗಿಕೊಂಡಿದ್ದು ನೆರೆದ ಭಕ್ತರನ್ನು ಆಕರ್ಷಿಸಿತು.

ಈ ವೇಳೆ ಉಜ್ಜಿನಿ ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಕಾಶಿ ಪೀಠದ ಜಗದ್ಗುರು ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಕೊಟ್ಟೂರಿನ ಡೋಣೂರ ಚಾನುಕೋಟಿ ಮಠದ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು, ಹರಪನಹಳ್ಳಿ ತೆಗ್ಗಿನಮಠದ ಸ್ವಾಮೀಜಿ, ಬೆಣ್ಣಿಹಳ್ಳಿ ಪಂಚಾಕ್ಷರಿ ಸ್ವಾಮಿಗಳು ಹಾಗೂ ಮತ್ತಿತರ ಮಠಾಧೀಶರರು ಹಾಗೂ ನಾಡಿನ ಮೂಲೆ ಮೂಲೆಗಳಿಂದ ಆಗಮಿಸಿದ ಭಕ್ತವೃಂದವು ಶ್ರೀಸ್ವಾಮಿಯ ಶಿಖರ ತೈಲಾಭಿಷೇಕಕ್ಕೆ ಸಾಕ್ಷಿಯಾದರು.



**ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಸ್ವಾಮಿಯ ತೈಲಾಭಿಷೇಕಕ್ಕೆ ಜರ್ಮಲಿ ಪಾಳೇಗಾರರ ವಂಶಸ್ಥರು ನಾಗರಾಜ ನಾಯಕ, ಬಸವರಾಜ್ ನಾಯಕ, ಮತ್ತಿತರರು ತೈಲ ತುಂಬಿದ ಕುಂಬ ಹೊತ್ತು ಶ್ರೀ ಪೀಠದ ಪಾದಗಟ್ಟೆ ಬಳಿ ಬಂದ ಕ್ಷಣ.**


MASSEY FERGUSON TAFE
ವಿಜಯಶ್ರೀ ಮೋಟಾರ್ಸ್
(ಟ್ರ್ಯಾಕ್ಟರ್ ವಿಭಾಗ)
RRR GROUP
99801 27607
73533 06719



ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ e-paper
REACH EVERY WHERE NO BORDER
ADS
9448633038
www.hampitimes.com


## ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಮೇ 14 ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಯಲ್ಲಿ ಎಫ್-73 ಫೀಡರ್ ನಿರ್ವಹಣೆ ಕಾರ್ಯವನ್ನು ತುರ್ತಾಗಿ ಕೈಗೆತ್ತಿಕೊಳ್ಳುತ್ತಿರುವುರಿಂದ ಮೇ 14 ರಂದು ಬೆಳಿಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಎಫ್-73 ಫೀಡರ್‌ನ ಬಸವನಕುಂಟೆ, ಕೋಟೆ ಪ್ರದೇಶ, 1 ನೇ ಗೇಟ್, 2 ನೇ ಗೇಟ್, ಸಿದ್ದಾರ್ಥ ನಗರ, ಸುಧಾ ಕ್ರಾಸ್, ಓ.ಪಿ.ಡಿ ಸೇರಿದಂತೆ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಶೋಕ ರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ


## ಹ.ಬೊ.ಹಳ್ಳಿ ಆದರ್ಶ ವಿದ್ಯಾಲಯಕ್ಕೆ ಎಸ್ಸೆಸ್ಸೆಲ್ಸಿ ಶೇ.96ರಷ್ಟು ಫಲಿತಾಂಶ



ಹರ್ಷಲ ಪ್ರೀತಿ



ಸೌಮ್ಯ ವಾಲಿಕರ್



ಪಿ.ಬಿ.ದೀಪಕ್



ಬಿ.ಅಂಜುಮ್

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣದ ಸರ್ಕಾರಿ ಆದರ್ಶ ವಿದ್ಯಾಲಯಕ್ಕೆ 2023-24ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ 4 ವಿದ್ಯಾರ್ಥಿಗಳು ಅತಿ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಶಾಲೆಗೆ ಶೇ.96ರಷ್ಟು ಫಲಿತಾಂಶ ಬಂದಿದೆ ಎಂದು ಶಾಲೆಯ ಮುಖ್ಯ ಶಿಕ್ಷಕ ಕೆ.ಕೊಟ್ರೇಶಪ್ಪ ತಿಳಿಸಿದರು.

ಪರೀಕ್ಷೆಗೆ ಒಟ್ಟು 75 ವಿದ್ಯಾರ್ಥಿಗಳು ದಾಖಲಾಗಿದ್ದು, ಪರೀಕ್ಷೆಗೆ 72 ವಿದ್ಯಾರ್ಥಿಗಳು ಹಾಜರಾಗಿ ತೇರ್ಗಡೆಯಾಗಿದ್ದಾರೆ. ಹರ್ಷಲ ಪ್ರೀತಿ ಮತ್ತು ಸೌಮ್ಯ ವಾಲಿಕರ್ 625ಕ್ಕೆ ತಲಾ 604 ಅಂಕಗಳನ್ನು ಪಡೆದು ಶೇ.96.64ರಷ್ಟು ಸಮನಾಗಿ ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗಿದ್ದಾರೆ. ಪಿ.ಬಿ.ದೀಪಕ್ 602 ಅಂಕಗಳೊಂದಿಗೆ ಶೇ.96.32 ಪಡೆದು ದ್ವಿತೀಯ, ಅದರಂತೆ ಬಿ.ಅಂಜುಮ್ 597 ಅಂಕಗಳೊಂದಿಗೆ ಶೇ.95.52 ರಷ್ಟು ಫಲಿತಾಂಶ ಪಡೆದು ತೃತೀಯ ಸ್ಥಾನದಲ್ಲಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಎಸ್‌ಡಿಎಂಸಿ ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

## 6ನೇ ತರಗತಿ ಪ್ರವೇಶಕ್ಕೆ ಅರ್ಹರಿಂದ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವತಿಯಿಂದ 5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ 2024-25ನೇ ಸಾಲಿಗೆ 6ನೇ ತರಗತಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ ಅರ್ಹತಾ ಪರೀಕ್ಷೆಯ ಮೂಲಕ ಪ್ರವೇಶ ಕಲ್ಪಿಸಲು ಅರ್ಜಿ ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರಾದ ಸತೀಶ್ ಕೆ.ಹೆಚ್ ಅವರು ತಿಳಿಸಿದ್ದಾರೆ. ಆಸಕ್ತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಆಯಾ ತಾಲ್ಲೂಕಿನ ಸಹಾಯ ನಿರ್ದೇಶಕರ ಕಚೇರಿಗಳಿಂದ ಅರ್ಜಿ ಪಡೆದು ಭರ್ತಿ ಮಾಡಿ ಮೇ 21 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮೇ 28 ರಂದು ಡಯಟ್ ಮೂಲಕ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಳ್ಳಾರಿಯಲ್ಲಿ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಬಳ್ಳಾರಿ:** ನಗರ ಜೆಸ್ಕಾಂ ಉಪವಿಭಾಗ-1 ವ್ಯಾಪ್ತಿಯ ಎಫ್-25 ರ ತುರ್ತು ನಿರ್ವಹಣಾ ಕಾಮಗಾರಿಯಿಂದಾಗಿ ಮೇ 14 ರಂದು ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ 110/11ಕೆವಿ ಸೌತ್ ವಿದ್ಯುತ್ ವಿತರಣ ಕೇಂದ್ರದ ವ್ಯಾಪ್ತಿಗೆ ಬರುವ ಪ್ರದೇಶಗಳಾದ ಕಾರ್ಕಲ ತೋಟ, ಬಾಪೂಜಿ ನಗರ, ರಾಣಿ ತೋಟ, ದೊಡ್ಡ ಮಾರ್ಕೆಟ್ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಮಳೆಗಾಗಿ ಧರ್ಮದ ಗುಡ್ಡದಲ್ಲಿ ವರುಣ ದೀಪ ಕಾರ್ಯಕ್ರಮ



■ **ಹಂಪಿ ಟೈಮ್ಸ್ ಹೊಸಪೇಟೆ**

ತಾಲೂಕಿನ ನಾಗೇನಹಳ್ಳಿ-ಬಸವನದುರ್ಗ ಸಮೀಪದ ಧರ್ಮದಗುಡ್ಡದಲ್ಲಿ ಸೋಮವಾರ ಹೊಸಪೇಟೆಯ ವಿವೇಕ ಜಾಗ್ರತ ಬಳಗ ಹಾಗೂ ಸರ್ವ ಸಮುದಾಯಗಳ ಒಕ್ಕೂಟ ನಾಗೇನಹಳ್ಳಿ ವತಿಯಿಂದ ಮಳೆಗಾಗಿ ವರುಣ ಪ್ರಾರ್ಥನೆ ನಡೆಯಿತು.

ಸ್ಥಳೀಯ ಮುಖಂಡ ದೇವರಮನಿ ಶ್ರೀನಿವಾಸ ಮಾತನಾಡಿ, 11 ದಿನ ನಿರಂತರವಾಗಿ ನಾಗೇನಹಳ್ಳಿ ಗ್ರಾಮದ ದೇವಸ್ಥಾನದ ಆವರಣದಲ್ಲಿ ಮಳೆಗಾಗಿ ಪ್ರಾರ್ಥಿಸುತ್ತಾ ಬಂದಿದ್ದು, 11ನೇ ದಿನ ಧರ್ಮದಗುಡ್ಡದ ಶ್ರೀ ಚನ್ನಬಸವೇಶ್ವರಸ್ವಾಮಿ, ನಿಜಲಿಂಗಮ್ಮದೇವಿ ಸನ್ನಿದಾನದಲ್ಲಿ ಮಾಡುತ್ತಿದ್ದೇವೆ. ತಾಪಮಾನ ಹೆಚ್ಚಾಗಿರುವುದರಿಂದ ಜನ, ಜಾನುವಾರುಗಳು ನೀರಿಗಾಗಿ ತತ್ತರಿಸುವಂತಾಗಿದೆ. ನಿರೀಕ್ಷಿತ ಅವಧಿಯಲ್ಲಿ ಮಳೆ ಸುರಿಯದ್ದರಿಂದ ರೈತರು ಆತಂಕಕ್ಕೀಡಾಗಿದ್ದಾರೆ. ರೈತರ ಆತಂಕ ದೂರಾಗಿಸಲು ಮತ್ತು ಜನ, ಜಾನುವಾರು, ಕೃಷಿ ಚಟುವಟಿಕೆಗಳು ವೇಗ ಪಡೆಯಲು ವರುಣ ದೇವನನ್ನು ಶ್ರೀ ರಾಮ ರಕ್ಷಾ ಸ್ತೋತ್ರ ಪಠಣ ಕಾರ್ಯಕ್ರಮದ ಮೂಲಕ ಪ್ರಾರ್ಥಿಸಿದ್ದೇವೆ ಎಂದರು. ರವಿಶಂಕರ ಸೇರಿದಂತೆ ಅನೇಕರು ಇದ್ದರು.


ಮಕ್ಕಳು ಅರಸರಾಗಬೇಕೆ?
ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?


## ಕೊಪ್ಪಳ ಕೇಸರ್ ಮಾವಿಗೆ ಹೆಚ್ಚಿದ ಬೇಡಿಕೆ

### 1 ಕೆ.ಜಿ.ಗೆ ರೂ.2.50 ಲಕ್ಷ ರೂ. । 12ಕ್ಕೂ ಹೆಚ್ಚಿನ ಮಾವಿನ ತಳಿಗಳು

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತೋಟಗಾರಿಕೆ ಇಲಾಖೆಯಿಂದ ಮೇ 13ರಿಂದ ಮೇ 21ರ ವರೆಗೆ ಕೊಪ್ಪಳ ನಗರದ ಎಲ್.ಐ.ಸಿ ಆಫೀಸ್ ಹತ್ತಿರವಿರುವ ತೋಟಗಾರಿಕೆ ಇಲಾಖೆ ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾವು ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಜಿಲ್ಲಾಧಿಕಾರಿ ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸಲು ಈ ಮೇಳವನ್ನು ಆಯೋಜಿಸಲಾಗಿದೆ.

ಈ ಮೇಳದಲ್ಲಿ ಕೇಸರ್, ಬೆನೆಶಾನ್, ದಶಹರಿ, ರಸಪುರಿ, ಸ್ವರ್ಣರೇಖಾ, ಇಮಾಮ ಪಸಂಧ, ಆಪೋಸು, ಮಲ್ಲಿಕಾ, ತೋತಾಪೂರಿ, ಪುನಾಸ್ ಸೇರಿದಂತೆ 100 ಕ್ಕೂ ಅಧಿಕ ವಿವಿಧ ಮಾವಿನ ತಳಿಗಳನ್ನು ಹಾಗೂ ಪುನಾಸ್






ಜಾಕಿ ಎಂಬ ಜಪಾನ ತಳಿಯ ಹಣ್ಣನ್ನು ಪ್ರದರ್ಶನಕ್ಕೆ ಇಡಲಾಗಿದೆ. ಈ ಮಾವಿನ ತಳಿಯ ಬೆಲೆಯು 1 ಕೆ.ಜಿ.ಗೆ ರೂ. 2.50 ಲಕ್ಷ ಬೆಲೆ ಬಾಳುತ್ತದೆ. ಈ ಮೇಳದಲ್ಲಿ ಮಿಯಾ ಜಾಕಿ ಹಣ್ಣಿನ ಗಿಡಗಳನ್ನು ಬೆಳೆಯಲು ಆಸಕ್ತಿ ಇರುವ ರೈತರಿಗೆ ಗುಣಮಟ್ಟದ ಗಿಡಗಳ ಪೂರೈಕೆ ಕುರಿತು ಸಹ ಮಾಹಿತಿ ನೀಡಲಾಗುತ್ತಿದೆ.

ಈ ಮೇಳದಲ್ಲಿ 12ಕ್ಕೂ ಹೆಚ್ಚಿನ ಮಾವಿನ ತಳಿಗಳನ್ನು ರೈತರು ನೇರವಾಗಿ ಮಾರಾಟ ಮಾಡಲು ಅನುಕೂಲ ಕಲ್ಪಿಸಲಾಗಿದೆ ಹಾಗೂ ಮೇಳದಲ್ಲಿ ಸಾವಯವದಲ್ಲಿ ಬೆಳೆದ ಹಾಗೂ ದೃಢೀಕರಣದ ಪ್ರಮಾಣ ಪತ್ರ ಹೊಂದಿದ ರೈತರು ಭಾಗವಹಿಸಿದ್ದಾರೆ. ವಿವಿಧ ತಳಿಗೆ ಯೋಗ್ಯ ಬೆಲೆಯನ್ನು ಈ ಮೇಳದಲ್ಲಿ ನಿರ್ಧರಿಸಲಾಗಿದ್ದು, >4


COLD PRESSED OILS
HEALTH Benefits
• Heart Healthy
• Diabetes Friendly
• Healthy Skin & More
• Hair Fall Control
Nandi Enterprises
C/o HAMPI TIMES
Valmiki Circle, HOSAPETE
9482599089



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲು QR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1
Hampi Times E-paper SCAN AND READ
Leading in Local News Paper
60,000 +
HAMPI TIMES E-PAPER READERS
NEWS PAPER ADD THE BEST ADVERTISING PLATFORM TO BOOST YOUR BUSINESS
Book Your Advertisements in HAMPI TIMES Leading Local NEWS PAPER
■ Admissions ■ Requirements
■ Firm Branding ■ Public Notice
■ Change of Name ■ Obituary
■ Remembrance ■ Birthday wish ads
■ Events Display ■ Classified ads
94486 33038
E-mail: hampitimes@gmail.com | # Valmiki Circle hospet-583201

# ಮೊಬೈಲ್ ಎಂಬ ಮಾಯೆಯನ್ನು ದೂರ ಇಡೋಣ

■ ಜಿ. ಶ್ವೇತ, ಜಿ.ಕೋಡಿಹಳ್ಳಿ



ಒಂದು ಹಳ್ಳಿಯಲ್ಲಿ ಸೂರ್ಯಪ್ಪ ಮತ್ತು ಸಾವಿತ್ರಮ್ಮ ಎಂಬ ದಂಪತಿಗಳಿಗೆ ಅನಿತ ಎಂಬ ಮಗಳಿದ್ದಳು. ಬಡವರಾದರೂ ಸಹ ದಂಪತಿಗಳಿಗೆ ಮಗಳ ಮೇಲೆ ಬಹಳ ಪ್ರೀತಿ ಇತ್ತು. ಅದರಂತೆ ಅನಿತಾಳಿಗೆ ಓದುವುದರಲ್ಲಿ ತುಂಬಾ ಆಸಕ್ತಿ ಇತ್ತು. ಅನಿತಾಳ ತಂದೆ ಮಗಳಿಗೋಸ್ಕರ ದುಡಿಮೆ ಮಾಡಿ ಓದಿಸುತ್ತಿದ್ದ. ಅವಳಿಗೊಂದು ನೌಕರಿ ಬರಬೇಕು ಅಂತ ಕನಸು ಕಟ್ಟಿಕೊಂಡಿದ್ದರು. ಅನಿತ ಅದನ್ನು ನೆರವೇರಿಸುವ ಭರವಸೆ ನೀಡಿದ್ದಳು.

ಅನಿತಾ ಶಾಲೆಯಲ್ಲಿ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮೊದಲನೆ ಸ್ಥಾನ ಪಡೆಯುತ್ತಿದ್ದಳು. ಓದಿನಲ್ಲೂ ಸಹ ಎಲ್ಲರಿಗಿಂತ ಮುಂದೆ ಇದ್ದಳು. ಇದನ್ನು ಗಮನಿಸಿದ ದಂಪತಿಗಳು ಅನಿತಳಿಗೆ ಓದಲು ಸಹಾಯವಾಗಲಿ ಎಂಬ ಆಶಯದಿಂದ ಒಂದು ಮೊಬೈಲ್ ಕೊಡಿಸಿದರು. ಅನಿತ ಒಂದಿಷ್ಟು ದಿನ ಅದನ್ನು ಓದಲು ಮಾತ್ರ ಬಳಸಿದಳು. ದಿನಕಳೆದಂತೆ ಯಾವಾಗಲೂ ಫೋನಿನಲ್ಲಿಯೇ ಕಾಲ ಕಳೆಯಲು ಪ್ರಾರಂಭಿಸಿದಳು. ಹೀಗಾಗಿ ಓದುವುದರ ಕಡೆ ಗಮನ ಕಡಿಮೆಯಾಯಿತು. ಕ್ರಮೇಣವಾಗಿ ಅನಿತ ಮೊಬೈಲ್‌ಗೆ ಅಂಟಿಕೊಂಡಳು. ಮೊಬೈಲ್ ಬರುವುದಕ್ಕೂ ಮೊದಲು ಮಧ್ಯ ರಾತ್ರಿಯವರೆಗೂ ಓದುತ್ತಿದ್ದ ಅನಿತ, ಈಗ ಮಧ್ಯರಾತ್ರಿಯವರೆಗೂ ಮೊಬೈಲ್ ನೋಡುವುದರಲ್ಲೆ ಕಾಲಕಳೆಯತೊಡಗಿದಳು. ಮೊಬೈಲ್‌ಗೆ ಅಂಟಿಕೊಂಡ ಅನಿತ ಶಾಲೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿದಳು. ಓದಿನಲ್ಲೂ ಹಿಂದುಳಿದಳು. ಮೊಬೈಲ್‌ನಿಂದ ಅವಳು ತುಂಬಾ ಹಾಳಾಗಿ ಬಿಟ್ಟಳು.

ಒಂದು ದಿನ ಶಾಲೆಯಲ್ಲಿ ಶಿಕ್ಷಕರು ಮೊಬೈಲ್ ಬಗ್ಗೆ ತರಗತಿಯಲ್ಲಿ ಚರ್ಚೆ ನಡೆಸುತ್ತಿದ್ದರು. ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಆಗುವ ದೈಹಿಕ ಮತ್ತು ಮಾನಸಿಕ ತೊಂದರೆಗಳನ್ನು ಉದಾಹರಣೆ ಸಮೇತ ಎಳೆ ಎಳೆಯಾಗಿ ತಿಳಿಸಿದರು. ಶಿಕ್ಷಕರು ಹೇಳುತ್ತಿರುವುದನ್ನು ಕೇಳುತ್ತ ಕೂತಿದ್ದ ಅನಿತಗೆ ತನಗೆ ಹೇಳುತ್ತಿದ್ದಾರೆ ಎನಿಸಿತು. ಶಿಕ್ಷಕರು ಹೇಳಿದ ಪ್ರತಿಯೊಂದು ಲಕ್ಷಣಗಳು ಅವಳಲ್ಲಿದ್ದವು. ತಾನು ಇದರಿಂದ ಹೊರಬರದ ಹೊರತು ತನಗೆ ಬೇರೆ ದಾರಿ ಇಲ್ಲ ಎಂಬುದನ್ನು ಅರಿತುಕೊಂಡಳು.

ತರಗತಿ ಮುಗಿದ ನಂತರ ಆಫೀಸ್ ರೂಂಗೆ ತೆರಳಿದ ಅನಿತ ತಮ್ಮ ಮೊಬೈಲ್ ಸಮಸ್ಯೆಯನ್ನು ಶಿಕ್ಷಕರೆದುರು ಹೇಳಿಕೊಂಡಳು. ಶಿಕ್ಷಕರು ಅವಳ ಎಲ್ಲಾ ಸಮಸ್ಯೆಗಳನ್ನು ಆಲಿಸಿ, ಮೊಬೈಲ್‌ನಿಂದ ದೂರ ಉಳಿಯುವಂತೆ ಸಲಹೆ ನೀಡಿದರು. ಅಂದಿನಿಂದ ಅನಿತ ಮೊಬೈಲ್‌ನ್ನು ತನ್ನ ವೈರಿ ಎಂಬಂತೆ ದೂರ ಇಟ್ಟಳು. ಕನಿಷ್ಠ ಕಾಲ್ ಮಾಡಲೂ ಸಹ ಬಳಸಲಿಲ್ಲ. ತಾನು ಮಾಡಿದ ತಪ್ಪಿಗೆ ತಂದೆ ತಾಯಿಯ ಬಳಿ ಕ್ಷಮೆ ಕೇಳಿದಳು. ಅಂದಿನಿಂದ ಪುನಹ ಪುಸ್ತಕಗಳ ಸಹವಾಸ ಮಾಡಿದಳು.

ಎಂದಿನಂತೆ ಶಾಲೆಯ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಳು. ಅನಿತ ಮೊದಲಿನಂತೆ ಆದುದು ಎಲ್ಲರಿಗೂ ಸಂತಸ ತಂದಿತ್ತು. ಶಾಲೆಯ ಪ್ರತಿ ಭಾಷಣದಲ್ಲೂ ಮೊಬೈಲ್‌ನಿಂದ ಆಗುವ ತೊಂದರೆಗಳನ್ನು ತನ್ನ ಉದಾಹರಣೆಯೊಂದಿಗೆ ಹೇಳುತ್ತ, ತನ್ನ ಸ್ನೇಹಿತರೂ ಮೊಬೈಲ್‌ನಿಂದ ದೂರ ಇರುವಂತೆ ಮನವಿ ಮಾಡಿದಳು. ನಮಗೆ ಮೊಬೈಲ್ ಒಂದು ಸಾಧನವಾಗಿ ಬೇಕೇ ಹೊರತು, ಅದೇ ಜೀವನವಲ್ಲ ಎಂಬ ಕಟುಸತ್ಯವನ್ನು ಎಲ್ಲರಿಗೂ ತಿಳಿಸಿದಳು. ಈಗ ನಿಮ್ಮ ಸರದಿ. ಮೊಬೈಲ್‌ನಿಂದ ದೂರ ಇದ್ದಷ್ಟೂ ಆರೋಗ್ಯಕ್ಕೆ ಒಳ್ಳೆಯದು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ. **ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ–ಮೇಲ್:hampitimes@gmail.com
M: 9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

### ಸಾಧನೆಗಿರದು ಬಡತನದ ಅರಿವು, ಸಹಕಾರದ ನಿರೀಕ್ಷೆಯಲ್ಲಿ ಹಳ್ಳಿ ಹುಡುಗಿ

# ವಜ್ರದೇಹಿ ನಾಗಮಂಗಲದ ಶಾಲಿನಿ

ದೇಹದಾಢ್ಯತೆ ಗಂಡು ಮಕ್ಕಳ ಕ್ರೀಡೆ ಎಂಬುದೊಂದು ಕಾಲ ಇತ್ತು, ಆದರೆ ಇಂದು ಹೆಣ್ಣು ಮಕ್ಕಳು ಸಹ ದೇಹದಾಢ್ಯತೆ ಕಡೆ ಒಲವು ತೋರಿಸುತ್ತಿದ್ದಾರೆ. ರಾತ್ರಿ 09 ರಿಂದ 10 ಗಂಟೆಯ ಸಮಯದಲ್ಲಿ ತರಬೇತಿಯನ್ನು ಮುಗಿಸಿಕೊಂಡು ಬರುತ್ತಿದ್ದಂತಹ ಸಂದರ್ಭ ದಾರಿಹೋಕರು ಹಾಗೂ ಅವರ ಓಣಿಯ ಜನರು ಹೆಣ್ಣು ಮಗಳು ಇಷ್ಟು ಹೊತ್ತಿನಲ್ಲಿ ಬರುತ್ತಿದ್ದಾಳಲ್ಲ ಎಂದು ಕುಹಕ ನುಡಿಯುತ್ತಿದ್ದರು, ಅದಾವುದನ್ನು ಲೆಕ್ಕಿಸದೆ ತಾನು ಅಂದುಕೊಂಡದ್ದನ್ನು ಸಾಧಿಸಲೇಬೇಕೆಂಬ ಛಲದಿಂದ ಮುನ್ನಡೆಯುತ್ತಿದ್ದಾರೆ ಶಾಲಿನಿ.

ತಂದೆ–ದಿ,ಲಿಂಗರಾಜು ಮತ್ತು ತಾಯಿ– ಶಶಿಕಲಾ ನಾಗಮಂಗಲ ಊರಿನವರು ಇವರು ಮೊದಲು ಜುಡೋ ಕ್ರೀಡೆಯಲ್ಲಿ ಬೆಳಗಾಂನಲ್ಲಿ ತರಬೇತಿ ಪಡೆಯುತ್ತಿದ್ದರು ತಾಯಿಯ ಅನಾರೋಗ್ಯದ ಕಾರಣ ತರಬೇತಿಯನ್ನು ಮೊಟಕುಗೊಳಿಸಿ ಸ್ವಗ್ರಾಮಕ್ಕೆ ವಾಪಸಾಗುತ್ತಾರೆ.

ಇಂದಿಗೂ ಕಡು ಬಡತನ ಅನುಭವಿಸುತ್ತಿರುವ ಯುವ ಸಾಧಕಿ ಶಾಲಿನಿ ತನ್ನ ತಾಯಿ ತಮಗೋಸ್ಕರ ಮಾಡುತ್ತಿದ್ದ ಕೆಲಸಗಳನ್ನು ಕಣ್ಣಾರೆ ಕಂಡು ಮರುಕಪಟ್ಟಿದ್ದಲ್ಲದೆ ತಾಯಿಯ ಸ್ಫೂರ್ತಿಯ ನುಡಿಗಳಿಂದ ಪ್ರೇರಿತರಾಗಿ ಏನನ್ನಾದರೂ ಸಾಧಿಸಲೇಬೇಕೆಂದು ಛಲತೊಡುತ್ತಾರೆ.




ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಬಾಲ್ಯದಿಂದಲೂ ಹೆಚ್ಚಿನ ದೇಹ ತೂಕವನ್ನು ಹೊಂದಿದ್ದ ಇವರು ಅದನ್ನು ಕಡಿಮೆ ಮಾಡಿ ಕೊಳ್ಳುವ ಉದ್ದೇಶದಿಂದ ವ್ಯಾಯಾಮ ಶಾಲೆಯನ್ನು ಸೇರುತ್ತಾರೆ ಕಠಿಣ ತರಬೇತಿಯನ್ನು ಪಡೆದು ದೇಹವನ್ನು ದಂಡಿಸುತ್ತಾರೆ. ತದನಂತರ ತಾಯಿ ನುಡಿದ ಸ್ಫೂರ್ತಿಯ ನುಡಿಗಳು ಇವರನ್ನು ದೇಹದಾಢ್ಯ ಪಟುವಾಗಲು ತನ್ನ ಮನದೊಳಗೆ ಹುರಿದುಂಬಿಸಿ ಕೊಂಡು ತನ್ನ ತಾಯಿ ಯೊಂದಿಗೆ ಚರ್ಚಿಸಿ ನಿರ್ಧರಿ ಸುತ್ತಾರೆ. ವ್ಯಾಯಾಮ ಶಾಲೆಯ ಮಾರ್ಗ ದರ್ಶಕರಾದ ಯೋಗೀಶ್ ಇವರೊಂದಿಗೆ ಚರ್ಚಿಸಿ ದೇಹದಾಢ್ಯತೆಗೆ ಬೇಕಾದ ಸಿದ್ಧತೆಗಳನ್ನು ಮಾಡಿ ಕೊಳ್ಳುತ್ತಾರೆ.

ಬಾಡಿ ಬಿಲ್ಡಿಂಗ್ ಮಾಡಲು ಸಾಕಷ್ಟು ಆಹಾರವನ್ನು ಸೇವಿಸಬೇಕಾಗುತ್ತದೆ ಅವುಗಳು ಪೌಷ್ಟಿಕಾಂಶದಿಂದ ಕೂಡಿರಬೇಕಾಗುತ್ತದೆ ಅವುಗಳಿಗೆ ತಗಲುವ ವೆಚ್ಚವನ್ನು ಬರಿಸಲು ನೆರವಾದವರೇ ಬೀರೇಶ್ವರ ಸಂತೋಷ್, ಚಿಕ್ಕಪ್ಪ ಸೋಮಶೇಖರ್, ಮಾಮ ಹರೀಶ್, ಅಣ್ಣ ವಿಜಯ್ ಕುಮಾರ್ ಇವರೆಲ್ಲರ ಸಹಕಾರ ಇವರ ಹಸಿವು ನೀಗಿಸಲು ಸಹಕಾರಿಯಾಗುತ್ತದೆ. 2024 ಭೂತಾನ್ ನಲ್ಲಿ ನಡೆದ ಏಷಿಯನ್ ವರ್ಲ್ಡ್ ಪವರ್ ಸ್ಪೋರ್ಟ್ಸ್ ಫೆಡರೇಶನ್ ಇವರ ಆಶ್ರಯದಲ್ಲಿ ಅಂತರ ರಾಷ್ಟ್ರೀಯ ದೇಹ ದಾಢ್ಯ ಸ್ಪರ್ಧೆಯಲ್ಲಿ 75 ಕೆ.ಜಿ ದೇಹ ತೂಕ ವಿಭಾಗದಲ್ಲಿ ಶಾಲಿನಿ ಚಿನ್ನದ ಪದಕ ವನ್ನು ಪಡೆದಿದ್ದಾರೆ.



ಶಾಲಿನಿ

ಇದು ನನ್ನ ಚೊಚ್ಚಲ ಅಂತರಾಷ್ಟ್ರೀಯ ಪದಕವಾಗಿದ್ದು ಭಾರತ ದೇಶದ ಧ್ವಜವನ್ನು ಹಿಡಿದು ಸಂಭ್ರಮಿಸುವ ಸಂದರ್ಭ ತಂದೆಯ ನೆನಪಾಯಿತು ಆದರೆ ನೋಡಿ ಸಂತೋಷ ಪಡಲು ಅವರಿಲ್ಲದ ಕಾರಣ ತರಬೇತುದಾರರಾದ ಯೋಗೀಶ್ ಅವರನ್ನೇ ತಂದೆ ಎಂದು ನೆನೆದು ಕಣ್ಣೀರು ಹಾಕಿದೆ ಎಂಬುದಾಗಿ ಶಾಲಿನಿ ತಿಳಿಸುತ್ತಾರೆ.

ವಿದೇಶಗಳಿಂದ ಬಂದಿದ್ದ ನುರಿತ ದೇಹದಾಢ್ಯಪಟುಗಳ ನಡುವೆ ನಾನು ಈ ಸಾಧನೆ ಮಾಡುತ್ತೇನೆ ಎಂಬ ನಂಬಿಕೆ ನನ್ನಲ್ಲಿ ಇರಲಿಲ್ಲ ಸ್ಪರ್ಧೆ ನಡೆಯುತ್ತಾ ನಡೆಯುತ್ತಾ ಪ್ರಥಮ ಸ್ಥಾನಕ್ಕೆ ನನ್ನ ಹೆಸರನ್ನು ಘೋಷಿಸಿದಾಗ ಎಲ್ಲಿಲ್ಲದ ಸಂಭ್ರಮ ನನ್ನ ಮನದಲ್ಲಿ ಮನೆ ಮಾಡಿತು ಎಂದು ಶಾಲಿನಿ ಸಂದರ್ಶನದಲ್ಲಿ ತಿಳಿಸುತ್ತಾರೆ.

ಪ್ರತಿನಿತ್ಯ ಬೆಳಿಗ್ಗೆ ಮತ್ತು ಸಂಜೆ ತಲಾ 5 ಗಂಟೆಗಳ ಕಠಿಣ ತರಬೇತು ಪಡೆದು ಶಾಲಿನಿ ದೇಹವನ್ನು ದಂಡಿಸಿರುತ್ತಾರೆ. ಡೆಡಿಕೇಶನ್ ಮತ್ತು ಹಾರ್ಡ್ ವರ್ಕ್ ಸಕ್ಸೆಸ್ಗೆ ಕಾರಣ 2023ರಲ್ಲಿ ಆರಂಭಿಸಿ ಕಡಿಮೆ ಕಾಲಾವಧಿಯಲ್ಲಿ ನಾನು ಇದನ್ನು ಸಾಧಿಸಲು ನನ್ನ ತಾಯಿ ಹಾಗೂ ತರಬೇತುದಾರರು ಹಾಗೂ ಸಹಕರಿಸಿದ ಎಲ್ಲರೂ ಕಾರಣ ಎಂದು ನುಡಿಯುತ್ತಾರೆ.

ತೀರಾ ಹೇಳಿಕೊಳ್ಳುವ ಸ್ಥಿತಿಯಲ್ಲಿ ಇರದ ನಾವು ನಮ್ಮ ಜೀವನೋಪಾಯಕ್ಕಾಗಿ ಗಂಡನಿಲ್ಲ ಆದರೂ ಕೂಲಿ ಕೆಲಸ ಮಾಡಿಕೊಂಡು ಮಕ್ಕಳನ್ನು ಸಾಕಿದ್ದೇನೆ ನನಗೆ ಗಂಡು ಮಕ್ಕಳಿಲ್ಲ ಆದರೂ ಅವರು ಸಾಧಿಸಬೇಕಾದದ್ದನ್ನು ನನ್ನ ಹೆಣ್ಣು ಮಗಳು ಶಾಲಿನಿ ಸಾಧಿಸಿದ್ದಾಳೆ. ನನಗೆ ತುಂಬಾ ಗೌರವ ಮತ್ತು ಹೆಮ್ಮೆ ಇದೆ ತಂದೆ ಇಲ್ಲದ ಮಗಳು ಈ ಮಟ್ಟಕ್ಕೆ ಸಾಧನೆ ಮಾಡಿದ್ದಾಳೆ ಎಂದು ಹೇಳುತ್ತಾರೆ ತಾಯಿ ಶಶಿಕಲಾ.

ಮೊದಮೊದಲು ಈ ಮಗು ದೇಹದಾಢ್ಯಪಟುವಾಗುತ್ತೇನೆ ಎಂದಾಗ ಸ್ವಲ್ಪ ಯೋಚನೆ ಮಾಡುವ ಸ್ಥಿತಿಯಲ್ಲಿದ್ದೆ ಆದರೆ ಈ ಹಿಂದೆ ಇವಳು ಪಟ್ಟ ಕಠಿಣ ಶ್ರಮ, ತೀರ ಹತ್ತಿರದಿಂದ ಗಮನಿಸಿದ ನಾನು ಆಯ್ತು ಎಂದು ಒಪ್ಪಿಗೆ ಕೊಟ್ಟ ಪರಿಣಾಮವೇ ಅಂತರಾಷ್ಟ್ರೀಯ ಪ್ರಶಸ್ತಿ. ಮುಂದೆ ಇವರಿಗೆ ಬೇಕಾಗುವಂತಹ ತರಬೇತಿ ಸಹಾಯವನ್ನು ನಾನು ಮಾಡುತ್ತೇನೆ ಎಂದು ನುಡಿಯುತ್ತಾರೆ ತರಬೇತು ದಾರ ಯೋಗೀಶ್. ಹೆಣ್ಣು ಮಕ್ಕಳು ಎಂಬ ಕೀಳರಮೆ ಯಾರಲ್ಲಿಯೂ ಇರ ಬಾರದು ಯಾವುದೇ ಕ್ರೀಡಾ ಕ್ಷೇತ್ರದಲ್ಲಿ ಕಠಿಣ ಶ್ರಮ ಶ್ರದ್ಧೆಯಿಂದ ಸೂಕ್ತ ಮಾರ್ಗದರ್ಶನದಲ್ಲಿ ತರಬೇತಿ ಪಡೆದರೆ ಸಾಧನೆ ಶತಸಿದ್ಧ.

ಉಳಿದ ಕ್ರೀಡೆಗಳಂತೆ ಬಾಡಿ ಬಿಲ್ಡಿಂಗ್ ಗೆ ಸರ್ಕಾರ, ಪೋಷಕರು ಸಹಕಾರ ನೀಡಬೇಕು ಆಗ ಮಾತ್ರ ಈ ಕ್ರೀಡೆಯಲ್ಲಿ ಇನ್ನಷ್ಟು ಸಾಧಕರು ಹೊರಬರಲು ಸಾಧ್ಯ. ಮುಂಬರುವ ಸ್ಪರ್ಧೆಗಳಲ್ಲಿ ಭಾಗವಹಿಸಿ ದೇಶಕ್ಕೆ ಕೀರ್ತಿ ತರುವ ಆಸೆಯನ್ನು ಹೊಂದಿದ್ದೇನೆ ಆದರೆ ನನಗೆ ಆರ್ಥಿಕ ಸಹಾಯವನ್ನು ಸರ್ಕಾರ, ಸಂಘ ಸಂಸ್ಥೆ, ಕ್ರೀಡಾ ಪ್ರೋತ್ಸಾಹಕರು ಸಹಕಾರ ನೀಡಿದ್ದೆ ಆದರೆ ಕಠಿಣ ಶ್ರಮದಿಂದ ತಪ್ಪದೇ ಪದಕಗಳನ್ನು ಗೆದ್ದು ತರುತ್ತೇನೆ ಎಂದು ನುಡಿಯುತ್ತಾರೆ ನೈಸರ್ಗಿಕ ದೇಹದಾರ್ಢ್ಯ ಪಟು ಶಾಲಿನಿ(97415 98449). ಸರಿಯಾದ ವೈಜ್ಞಾನಿಕ ತರಬೇತಿ, ಉತ್ತಮ ಪೌಷ್ಟಿಕ ಆಹಾರ ಮತ್ತು ಸರಿಯಾದ ವಿಶ್ರಾಂತಿ ಪಡೆಯುವುದರೊಂದಿಗೆ ಸೂಕ್ತವಾದ ದೇಹಕ್ಕೆ ಮಾರಕವಾಗದ ಪೂರಕ ಪೋಷಕಾಂಶಗಳನ್ನು ಪಡೆಯುವುದನ್ನು ಮರೆಯಬಾರದು.

ಮಾರುಕಟ್ಟೆಯಲ್ಲಿ ಲಭ್ಯವಾಗುವ ಅನಗತ್ಯ ಅವೈಜ್ಞಾನಿಕ ಪೂರಕಗಳನ್ನು ಪಡೆದು ಆರೋಗ್ಯವನ್ನು ಹಾಳು ಮಾಡಿಕೊಳ್ಳಬೇಡಿ ಎಂದು ಹೇಳುತ್ತಾರೆ ಯುವ ಸಾಧಕಿ.

ಈ ಹೆಣ್ಣು ಮಗಳ ಸಾಧನೆ ನಿಜಕ್ಕೂ ಪ್ರಶಂಸನೀಯ ಹಳ್ಳಿ ಹುಡುಗಿಯಾದರು ಅಂತರಾಷ್ಟ್ರೀಯ ಮಟ್ಟದಲ್ಲಿ ಕೀರ್ತಿ ಗಳಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆ. ಹೆಣ್ಣು ಮಕ್ಕಳೆಂಬ ಭಾವನೆಯನ್ನು ಮರೆತು ಅವರ ಸಾಧನೆಯನ್ನು ನೋಡಿ ಸಹಕಾರ ನೀಡಿದ್ದೆ ಆದರೆ ಇನ್ನಷ್ಟು ಸಾಧನೆಗಳನ್ನು ಇವರಿಂದ ನಿರೀಕ್ಷಿಸಬಹುದಾಗಿದೆ. ಮುಂದಿನ ದಿನಗಳಲ್ಲಿ ನಿಮಗೆ ಸಿಗಬೇಕಾದ ಸಹಾಯ ದೊರೆತು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕೀರ್ತಿ ಮತ್ತಷ್ಟು ಉತ್ತುಂಗಕ್ಕೇರಿಸುವಂತಾಗಲಿ.

# ಗಂಡ ಹೆಂಡಿರ ಜಗಳ... ಗಂಧ ತೀಡಿದಂಗ

ಪ್ರವೀಣ್ ಮತ್ತು ಪ್ರಿಯಾ ಒಂದೇ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಸಹೋದ್ಯೋಗಿಗಳು. ಪರಸ್ಪರ ಸ್ನೇಹ ಪ್ರೇಮವಾಗಿ, ಪ್ರೇಮಕ್ಕೆ ಹಿರಿಯರ ಒಪ್ಪಿಗೆ ದೊರೆತು ಮದುವೆ ಎಂಬ ಮುದ್ರೆ ಬಿದ್ದು ಈಗಾಗಲೇ ಆರು ತಿಂಗಳಾಗಿತ್ತು. ಇಬ್ಬರೂ ಸಿಟಿ ಬಸ್ಸಿನಲ್ಲಿ ಒಟ್ಟಿಗೆ ಆಫೀಸಿಗೆ ಹೋಗಿ ಬರುತ್ತಿದ್ದರು. ಅದೊಂದು ದಿನ ದಂಪತಿಗಳಿಬ್ಬರೂ ಯಾವುದೋ ಕಾರಣಕ್ಕೆ ಜಗಳವಾಡಿ ಮುನಿಸಿಕೊಂಡಿದ್ದರು. ಇಬ್ಬರಲ್ಲಿ ಯಾರೊಬ್ಬರೂ ಸೋತು ಮಾತನಾಡಲಿಲ್ಲ.

ಪ್ರಿಯಾ ತನ್ನ ಪಾಡಿಗೆ ತಾನು ಎದ್ದು ಮನೆ ಕೆಲಸ ಪೂರೈಸಿ ತಿಂಡಿ ಮಾಡಿದರೆ, ಪ್ರವೀಣ್ ನಿತ್ಯ ವಿಧಿಗಳನ್ನು ಪೂರೈಸಿ ತಿಂಡಿ ತಿಂದು ಮನೆಯ ಹೊರಗೆ ನಿಂತನು. ಈಗಾಗಲೇ ತಿಂಡಿ ತಿಂದು ರೆಡಿಯಾಗುತ್ತಿದ್ದ ಆಕೆ ಕೂಡ ತನ್ನ ಅಲಂಕಾರವನ್ನು ಪೂರೈಸಿ ಇಬ್ಬರಿಗೂ ಊಟದ ಡಬ್ಬಿ ಮತ್ತು ನೀರನ್ನು ತೆಗೆದುಕೊಂಡು ಮನೆಯ ಹೊರಬಂದು ನಿಲ್ಲಲು, ಆತ ಮನೆಯ ಬಾಗಿಲನ್ನು ಚಿಲಕ ಹಾಕಿ ಕೀಲಿ ಜಡಿದನು. ಪರಸ್ಪರ ಮಾತನಾಡದೆ ಇದ್ದರೂ ಜೊತೆಯಾಗಿಯೇ ಬಸ್ ಸ್ಟಾಪ್ ಗೆ ಬಂದು ನಿಂತ ಆ ದಂಪತಿಗಳಲ್ಲಿ ಪತ್ನಿ ಯಾವಾಗಲೂ ಕೂಡುತ್ತಿದ್ದ ಹಾಗೆ ಪತಿಯ ಪಕ್ಕ ಕುಳಿತುಕೊಳ್ಳದೆ ಮುಂದಿನ ಸೀಟಿಗೆ ಹೋಗಿ ಕುಳಿತಳು. ಇದನ್ನು ನೋಡಿ ತುಸು ಅಸಮಾಧಾನಗೊಂಡರೂ ಏನೂ ಮಾಡಲಾಗದೆ ಕೈ ಕೈ ಹಿಸುಕಿಕೊಂಡು ಸುಮ್ಮನೆ ಕುಳಿತ ಪತಿರಾಯ.

ಪಕ್ಕಕ್ಕೆ ತಿರುಗಿ ನೋಡಿದ ಪ್ರಿಯಾಗೆ ಕಂಡದ್ದು ಒಬ್ಬ ಆಕರ್ಷಕ ವ್ಯಕ್ತಿತ್ವದ 30ರ ಹರೆಯದ ಸುಂದರ ತರುಣ. ಅದೇ ಸಮಯಕ್ಕೆ ಆತನು ಕೂಡ ಈಕೆಯತ್ತ ತಿರುಗಿ ನೋಡಿದಾಗ ಪರಸ್ಪರ ಮುಗುಳ್ನಗೆ ವಿನಿಮಯವಾಯಿತು. ಕೆಲ ಕ್ಷಣಗಳ ನಂತರ ಆಕೆಯೊಂದಿಗೆ ಕುಶಲೋಪರಿಯನ್ನು ಆರಂಭಿಸಿದ ಆ ವ್ಯಕ್ತಿ. ಆಕೆಯೂ ಕೂಡ ಆತನ ಮಾತಿಗೆ ಸ್ಪಂದಿಸಿದಳು. ಕೆಲವು ನಿಮಿಷಗಳ ಮಾತುಕತೆಯ ನಂತರ ಆತ ತಾನು ಕಾರನ್ನು ಸರ್ವಿಸಿಗೆ ಬಿಟ್ಟಿರುವುದರಿಂದ ಇಂದು ಬಸ್ಸಿನಲ್ಲಿ ಬಂದಿರುವುದಾಗಿ ಹೇಳಿದನು... ಜೊತೆಗೆ ತನ್ನ ಮನೆಯಲ್ಲಿ ಮದುವೆಗೆ ಒತ್ತಾಯ ಮಾಡು ತ್ತಿರುವುದರಿಂದ ಸೂಕ್ತವಾದ ಕನ್ಯೆಯ ಹುಡುಕಾಟದಲ್ಲಿರುವೆ ಎಂದು ಆಕೆಯನ್ನು ಆಪಾದಮಸ್ತಕ ನೋಡುತ್ತಾ ಹೇಳಿದನು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಈಗಾಗಲೇ ಹಿಂದೆ ಕುಳಿತು ಇವರ ಮಾತುಗಳನ್ನು ಕೇಳುತ್ತಾ ಚಡಪಡಿಸುತ್ತಿದ್ದ ಪತಿರಾಯನಿಗೆ ಇನ್ನು ಸುಮ್ಮನೆ ಕೂರಲಾಗಲಿಲ್ಲ. ಕೂಡಲೇ ಪತ್ನಿಯನ್ನು ಉದ್ದೇಶಿಸಿ ಪ್ರಿಯಾ, ಸಾನ್ವಿ ಪುಟ್ಟಿಯ ಬರ್ತಡೇ ಬಟ್ಟೆ ಖರೀದಿಸಲು ಹೋಗಬೇಕು ಎಂಬುದು ನೆನಪಿದೆಯಲ್ಲವೇ? ಎಂದು ಜೋರಾಗಿ ಆಕೆಯ ಭುಜವನ್ನು ತಟ್ಟಿ ಕೇಳಿದನು. ಗಂಡನ ಮಾತಿಗೆ ಸ್ವಲ್ಪ ಗಲಿಬಿಲಿಗೊಂಡರೂ ಪ್ರಿಯಾ ಸಂಭಾಳಿಸಿಕೊಂಡು ಇಂದು ಸಂಜೆಯೇ ತಂದು ಬಿಡೋಣ ಎಂದು ಉತ್ತರಿಸಿದಳು ಕೂಡಲೇ ಪ್ರಿಯಾಳ ಪಕ್ಕ ಕುಳಿತಿದ್ದ ವ್ಯಕ್ತಿ ಹಿಂತಿರುಗಿ ಪ್ರವೀಣನನ್ನು ನೋಡಿ ಯಾರಿವರು? ಎಂಬಂತೆ ಪ್ರಿಯಾಳಿಗೆ ಸನ್ನೆ ಮಾಡಿ ಕೇಳಿದನು. ಕೂಡಲೇ ಪ್ರಿಯ ಆತ ತನ್ನ ಪತಿ ಎಂದು ಪರಿಚಯಿಸಿದಳು. ಕೊಂಚ ಸಲುಗೆಯಿಂದಲೇ ಪ್ರಿಯಾಳೊಂದಿಗೆ ವ್ಯವಹರಿಸುತ್ತಿದ್ದ ಆಕೆಯ ಪಕ್ಕ ಕುಳಿತ ವ್ಯಕ್ತಿ ಇದರಿಂದ ತುಸು ಕಕ್ಕಾವಿಕ್ಕಿಯಾದನು. ಮುಂದೆ ಕೆಲವೇ ನಿಮಿಷಗಳಲ್ಲಿ ಬಸ್ಸು ಸ್ಟಾಪಿಗೆ ಬಂದು ನಿಲ್ಲುತ್ತಲೇ ಎದ್ದು ನಿಂತ ಪ್ರವೀಣ್ ಪ್ರಿಯಾಳ ಕೈ ಹಿಡಿದು ಬಸ್ಸಿನಿಂದ ಕೆಳಗಿಳಿಯುತ್ತಲೇ ಆ ಪಕ್ಕದ ವ್ಯಕ್ತಿಗೆ ಬಾಯ್ ಹೇಳಿದನು.

ಬಸ್ಸು ಮುಂದೆ ಹೋದ ಕೂಡಲೇ ಬಸ್ ಸ್ಟಾಪಿನ ಒಂದು ಮೂಲೆಯಲ್ಲಿ ನಿಂತು ಒಂದೇ ಸಮನೆ ಜೋರಾಗಿ ನಕ್ಕಳು ಪ್ರಿಯಾ. ಆಕೆಯ ನಗುವಿನಲ್ಲಿ ಕಳೆದುಹೋದ ಪ್ರವೀಣ. ನಕ್ಕು ಸಾಕಾದ ಮೇಲೆ "ಪ್ರವೀಣ್, ಈ ಸಾನ್ವಿ ಯಾರು? ಎಂದು ಕೇಳಿದಳು ಪ್ರಿಯಾ!. ಕೂಡಲೇ ನಸುನಗುತ್ತಾ ಪ್ರವೀಣ ನಮಗೆ ಮುಂದೆ ಹುಟ್ಟುವ ಮಗುವಿನ ಹೆಸರು ಸಾನ್ವಿ ಎಂದು ಹೇಳಿದನು. ಮತ್ತೊಮ್ಮೆ ಜೋರಾಗಿ ಇಬ್ಬರು ನಕ್ಕು ಕೈ ಕೈ ಹಿಡಿದುಕೊಂಡು ಬೇರೊಂದು ಬಸ್ಸನ್ನು ಹತ್ತಿ ತಮ್ಮ ಗಮ್ಯದತ್ತ ತೆರಳಿದರು.



ಕವಿ ಮನಸು

## ಅಮ್ಮ




ನೋವ ಮರೆಸುವ ಔಷಧವೆಂದರೆ ಅಮ್ಮ
ಹಟ ಮಾಡಿದರೆ ಕರೆಯುತ್ತಿದ್ದಳು ಗುಮ್ಮ
ತಾಯಿಯ ಪ್ರೀತಿ ನೀಡರು ಇನ್ನಾರು
ಅವಳೆ ತಾನೇ ನಮ್ಮ ಮೊದಲ ಗುರು

ಅಮ್ಮನ ಮಡಿಲು ಬೇಕು ನಿದ್ದೆಗೆ
ಮಗುವು ಮಲಗುವುದಲ್ಲಿ ಬೆಚ್ಚಗೆ
ಅಳು ನಿಲ್ಲಿಸುವುದು ಅಮ್ಮನ ಸ್ಪರ್ಶಕೆ
ತಾಯಿ ಇರುವಳು ಮಗುವಿನ ಸನಿಹಕೆ.

ತಾಯಂದಿರ ದಿನದ ಶುಭಾಶಯಗಳು

– ಸುವರ್ಣಾ ಭಟ್ಟ.

## ಕಾವರಿಲ್ಲದೇ...




ಯಾವ ಶಿಲ್ಪಿಯೊ ಕೆತ್ತಿ ಶಿಲ್ಪವ
ಭಾವ ತುಂಬಿದ ಮನದೊಳು
ದೇವ ಕನ್ನಿಕೆಯಂಥ ಚೆಲುವಿಕೆ
ಕಾವರಿಲ್ಲವೆ ನಾಡೊಳು

ಕೊರಳು ಬಳಸಿದ ದಾರ ಹೊಂದಿದೆ
ಕರದಿ ನುಡಿಸುವ ಮದ್ದಳೆ
ಕರವನೊಂದನು ಮೇಲಕೆತ್ತಿದೆ
ಶಿರದ ಹಿಂಬದಿ ಹಿಡಿದಳೆ

ಹಸಿರು ಲತೆಗಳು ಸುತ್ತುವರಿದಿವೆ
ಕುಸುಮ ಕೋಮಲೆ ಬಾಲೆಯ
ಮಸುಕುಗೊಳಿಸಿದೆ ಶಿಲ್ಪದಂದವ
ಹೊಸಕಿ ಹಾಕದೆ ಬಿಡುವುದೆ?

ಸೊರಗತೊಡಗಿದೆ ಕಾವರಿಲ್ಲದೆ
ಮರುಕ ತರಿಸುವ ತರವಿದೆ
ಕರಗಿ ಹೋಗುವ ಮುನ್ನ ರಕ್ಷಿಸಿ
ಪೊರೆವ ಮಂದಿಯ ಕಾಣದೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್




**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಪರಿಸರದ ಪರಮ ಅಡ್ಡೆ-ಅಂಗೂರು ಗಡ್ಡೆ



ಪ್ರಾಕೃತಿಕ ಪರಿಸರದ ಸೊಬಗು ಮಾನವನಿಗೆ ನೀಡುವ ಮುದದ ವಣ9ನೆ ವಣ9ನಾತೀತ,ಅನುಭವಿಸಿದ ಆತ್ಮಗಳಿಗೆ ಮಾತ್ರ ಗೊತ್ತು ಪರಿಸರದ ಪ್ರಾಕೃತಿಕ ಅಂತಃಸತ್ವ,ಸಕಲ ವ್ಯಾಕುಲಗಳಿಗೆ ದಿವ್ಯೌಷಧ ಪ್ರಾಕೃತಿಕ ಪರಿಸರದ ಸಂಕುಲ, ಬಳುಕುವ ಬೆಟ್ಟ,ದೂರ ನೋಟದಿ ಗಿಡ್ಡಾಗಿ ಕಾಣುವ ಗುಡ್ಡ, ಬಾನೆತ್ತರಕ್ಕೆ ಬೆಳೆದು ನಿಂತು ಅಂಬರಕ್ಕೆ ಚುಂಬನ ಕೊಡುವ ಕಾನನದ ತರಹೇವಾರಿ ತರುಗಳ ತುಂಟಾಟ,ಕಣ್ಣು ಹಾಯಿಸಿದಷ್ಟು ವಿಶಾಲವಾಗಿ ಹರಡಿರುವ ಜಲರಾಶಿ ಮುಂತಾದ ಪರಿಸರ ಪ್ರಾಕೃತಿಕ ಮೂಲಾಂಶಗಳು ಒಡಮೂಡಿಸುವ ಅಂತರಾಳದ ಆನಂದಕ್ಕೆ ಪಾರವೇ ಇಲ್ಲ,ಪರಿಸರದ ಪ್ರಾಕೃತಿಕ ವಿಸ್ಮಯ ಮನುಜನ ಮನದಿ ಅವಿಸ್ಮರಣೀಯ,ಇದಕ್ಕೆ ಪೂರಕವಾಗಿ ಪ್ರಾಕೃತಿಕ ಪರಿಸರದ ಸ್ವಚ್ಛಂದದ ಆಗರವಾಗಿ ನಿಂತು ಪ್ರವಾಸಿ ಪ್ರಿಯರನ್ನು, ಪ್ರಾಕೃತಿಕ ಪರಿಸರ ಪ್ರಿಯರನ್ನು ಕ್ಷಣಮಾತ್ರದಲ್ಲೇ ತನ್ನತ್ತ ಸೆಳೆಯುವ ತಾಣ ನಿಸರ್ಗ,ನೀರಿನಿಂದೊಡಗೂಡಿದ ಅಂಗೂರು ಗಡ್ಡೆ.

ಅಂದದೂರು ಅಂಗೂರು:ವಿಜಯನಗರ ಜಿಲ್ಲೆ ವಿಶ್ವಪ್ರಸಿದ್ಧ ವಿಜಯನಗರ ಸಾಮ್ರಾಜ್ಯವನ್ನು ಹೊಂದಿದ್ದು ಅದರ ರಾಜಧಾನಿಯಾಗಿದ್ದ ವಿಶ್ವ ಪಾರಂಪರಿಕ ತಾಣ ಖ್ಯಾತಿಯ ಹಂಪೆಯನ್ನು ತನ್ನಲ್ಲಿಟ್ಟುಕೊಂಡಿದ್ದು ಇಲ್ಲಿರುವ ನೈಸರ್ಗಿಕ ಬಯಲು ಸಂಗ್ರಹಾಲಯದ ಕಲ್ಲು ಬಂಡೆಗಳು ಕನ್ನಡ ನಾಡು,ನುಡಿಯ ಮಹತ್ವ ಸಾರುತ್ತವೆ, ಇಲ್ಲಿನ ವಿರೂಪಾಕ್ಷ ಸ್ವಾಮಿಗೆ ಬೆಳಗಿನ ಅಚ9ನೆಗೆ ಅಂದದ ಅಂಗೂರಿನಿಂದ ಹರಿಯುವ ಹೊಳೆಯ ಮುಖೇನ ಹೂವಿನಹಡಗಲಿಯಿಂದ ಹೂವುಗಳನ್ನು ಕಳಿಸುತ್ತಿದ್ದಿದ್ದು ಹೆಮ್ಮೆಯ ಸಂಗತಿ.ಇಂತಹ ಹೂವಿನಹಡಗಲಿ ತಾಲೂಕಿನಲ್ಲಿ ಗಾಢವಾದ ಹಚ್ಚ ಹಸಿರಿನ ಪ್ರಕೃತಿ ಮಡಿಲಲ್ಲಿ ಜಲಸೊಬಗಿನ ಸಿರಿಯ ನಡುವೆ ಮೈದಳೆದಿರುವ ಅಂದದೂರು ಅಂಗೂರು,ಸುಮಾರು ನಾಲ್ಕು ಸಾವಿರ ಜನಸಂಖ್ಯೆಯನ್ನು ಹೊಂದಿರುವ ಚಿಕ್ಕ, ಚೊಕ್ಕ ಪರಿಸರದ ಹೊಳ್ಳಿ ಹೊಳ್ಳಿ ನೋಡಬೇಕೆನಿಸುವ ಹೊಳಿಯೊಟ್ಟಿಗಿರುವ ಪುಟ್ಟ ಹಳ್ಳಿಯಾಗಿದ್ದು ತನ್ನ ಸುತ್ತುವರಿದಿರುವ ಕಾನನ,ಜಲ ಸೊಬಗಿಗೆ ಹೆಸರುವಾಸಿಯಾಗಿದ್ದು ಮೀನುಗಾರಿಕೆಗೆ ಖ್ಯಾತಿ ಪಡೆದಿದೆ.

**ಅಂಗೂರು ನಡುಗಡ್ಡೆ:** ತುಂಗಭದ್ರೆಯ ಒಡಲಂಚಿನಲ್ಲಿರುವ ಅಂಗೂರು ತುಂಗಭದ್ರೆಯ ಹರಿಯುವಿಕೆ ಯಿಂದ ಪ್ರಾಕೃತಿಕವಾಗಿ ಸತತ ಹಚ್ಚ ಹಸಿರಿನ ತೇವಮಯ ತಂಪು ವಾತಾವರಣ ಹೊಂದಿದ್ದು ತುಂಗಭದ್ರೆಯ ಹರಿವಿನಿಂದ



ಮೈದಳೆದಿರುವ ಅಂಗೂರು ಮತ್ತು ಸಾಸಲವಾಡ ಗ್ರಾಮಗಳ ನದಿಸೆರಗಿನಲ್ಲಿ ಸೆರೆಯಾಗಿ ನೆಲೆ ನಿಂತಿರುವ 'ನಡುಗಡ್ಡೆ' ಚಿಕ್ಕ ದ್ವೀಪದಂತೆ ಕಂಗೊಳಿಸುತ್ತಿದೆ,ಈ ನಡುಗಡ್ಡೆ ಸುತ್ತಲೂ ನೀರು ಹೊಂದಿದ್ದು ಮಧ್ಯದಲ್ಲಿ ಮಾತ್ರ ಭೂಪ್ರದೇಶ ಹೊಂದಿ ನಟ್ಟನಡುವಿನ ನಡುಗಡ್ಡೆಯಾಗಿ ನೋಡುಗರ ನೋಟಕ್ಕೆ ರೋಚಕ ಅನುಭವ ಹುಟ್ಟಿಸುತ್ತದೆ,ದ್ವೀಪದಂತೆ ಕಂಗೊಳಿಸುವ ಈ ನಡುಗಡ್ಡೆಯ ನೀರು ಪಾರದಶ9ಕ ಸ್ಪಟಿಕದಂತಿದ್ದು ಕಣ್ಣು ಕೋರೈಸುವುದರೊಂದಿಗೆ ಕಣ್ಣು ಇಣುಕಿಸಿದಷ್ಟೂ ಆಳವಾಗುವ ಗಾಢವಾದ ಆಳವನ್ನು ಹೊಂದಿದ್ದು ನೋಡುಗರಿಗೆ ರೋಚಕ ಅನುಭವ ನೀಡುತ್ತದೆ, ಪ್ರಾಣಿ ಪಕ್ಷಿಸಂಕುಲದ ಆಗರ ನಡುಗಡ್ಡೆ: ಎತ್ತ ನೋಡಿದತ್ತ ಹಸಿರಿನ ಐಸಿರಿ ಹೊತ್ತು ನಿಂತಿರುವ ನಡುಗಡ್ಡೆ ಯಲ್ಲಿ ಅನೇಕ ಸಾಧುಪ್ರಾಣಿ,ಪಕ್ಷಿಗಳ ಸಂಕುಲವಿದ್ದು ಪ್ರಾಣಿ ಪ್ರಿಯರು,ಪಕ್ಷಿಪ್ರೇಮಿಗಳು ಭೇಟಿ ಕೊಡುವ,ಪ್ರಾಣಿ ಪಕ್ಷಿಗಳ ಚಲನವಲನ ವೀಕ್ಷಣೆಯೊಂದಿಗೆ ಬಹಳಷ್ಟು ಕಾಲ ಕಳೆಯುವ ನೆಚ್ಚಿನ ತಾಣವಾಗಿದೆ,ಈ ನಡುಗಡ್ಡೆ ಯಲ್ಲಿ ಕೇಕೇ ಹಾಕಿ ಗರಿಬಿಚ್ಚಿ ನತಿ9ಸುವ,ತನ್ನ ಸೊಗಸಾದ ಸೊಬಗಿನೊಂದಿಗೆ ಜನರ ಮನ ಸೆಳೆಯುವ ಸೋಗೆ,ಬಾನೆತ್ತರಕ್ಕೆ ಹಾರಾಡುವ ಬಾನಾಡಿಗಳು,ನೋಡ ನೋಡುತ್ತಲೆ ನೀರಿನೊಳಗೆ ಧುಮುಕಿ ಮತ್ಸ್ಯಗಳ ಬೇಟೆಯಾಡುವ ಬೆಳ್ಳಕ್ಕಿ,ಗೊರ್ ಗೊರ್ ಎನ್ನುವ ಕೊಂಕುಮೋತಿಯ ಗೊರವಂಕಗಳು ಹಾಗೂ ಇನ್ನಿತರ ಪಕ್ಷಿಗಳನ್ನು ಕಣ್ತುಂಬಿಕೊಳ್ಳಬಹುದು,ಜೊತೆಗೆ ಸಣ್ಣ ಕಾಡಿನಂತಿರುವ ನಡುಗಡ್ಡೆ ಯಲ್ಲಿ ಸಾಧುಪ್ರಾಣಿಗಳಾದ ಮೊಲ,ಹರಿಣಿ,ನರಿ ಮೊದಲಾದ ಸಾಧುಪ್ರಾಣಿಗಳ ಸಾಮೀಪ್ಯ ಮನಸ್ಸಿಗೆ ಅತ್ಯಂತ ಆಪ್ತವಾಗುತ್ತದೆ,ಅಲ್ಲದೇ ಜಲಪ್ರದೇಶದಲ್ಲಿದ್ದು ಆಗಾಗ್ಗೆ ಜಲದಿಂದ ನಿಗ9ಮಿಸುವ ನೀರುನಾಯಿಗಳ ತುಂಟಾಟ,ಕೂಗಾಟ,ವಿವಿಧ ಜಾತಿಯ ಮತ್ಸ್ಯಗಳ ನೇರ ನೋಟ ಮನಸ್ಸಿಗೆ ಆಹ್ಲಾದ ತೆಯನ್ನು ನೀಡುತ್ತದೆ.

ಗಡ್ಡೆ ಬಸವೇಶ್ವರ, ವೀರಭದ್ರೇಶ್ವರ ದೇಗುಲಗಳು:ಸುತ್ತಲೂ ತಂಪೆಸಗುವ ತಂಪೋದಕದ ನಡುವೆ ಹಚ್ಚ ಹಸಿರಿನ ಮಡಿಲಿನ ಮಧ್ಯದಲ್ಲಿ ಅಸಂಖ್ಯಾತ ಭಕ್ತರ ಆರಾಧ್ಯ ದೈವವಾದ,ಬಹು ಮಹಿಮೆಯುಳ್ಳ ಗಡ್ಡೆ ಬಸವೇಶ್ವರ ಹಾಗೂ ವೀರಭದ್ರೇಶ್ವರ ದೇವಸ್ಥಾನಗಳಿದ್ದು ಪ್ರತಿವಷ9 ಗಡ್ಡೆಯಲ್ಲಿ ಜನರ ಅಡ್ಡೆಯೊಂದಿಗೆ ವೈಭವದ ಜಾತ್ರೆ ಕೂಡಾ ಜರುಗುತ್ತದೆ,ಈ ರಮಣೀಯ ನೈಸಗಿ9ಕ ಪರಿಸರದ ಪವ9ಕ್ಕೆ ರಾಜ್ಯದ ನಾನಾ ಭಾಗಗಳಿಂದ ಆಗಮಿಸುವ ಪರಿಷೆ ಸಾಕ್ಷಿಯಾಗುತ್ತದೆ.

**ತೆರೆಗಳ ನಡುವೆ ತೆಪ್ಪಯಾನ:**
ಜಿಗಿ ಜಿಗಿದು ಮೇಲೇಳುವ,ಹೊಂಬಿಸಿಲಿನೊಂದಿಗೆ ಹೊಯ್ದಾಡುವ ತೆರೆಗಳ ನಡುವಿನ ತೆಪ್ಪಯಾನ ಹೃನ್ಮನಗಳಿಗೆ ಅಗಾಧವಾದ ಆನಂದ ನೀಡುವುದರ ಜೊತೆಗೆ ಗಾಳಿ–ಅಲೆಗಳೊಂದಿಗಿನ ಆಲಾಪ ಒಮ್ಮೊಮ್ಮೆ ಕೊಂಚ ಭಯವನ್ನುಂಟು ಮಾಡಬಹುದು,ಆದರೆ ಮೀನುಗಾರಿಕೆಯನ್ನೇ ತಮ್ಮ ಕುಲಕಸುಬಾಗಿ ಹೊಂದಿದ ಮೀನುಗಾರರು ನಿತ್ಯ ತೆಪ್ಪದೊಂದಿಗಿನ ತಮ್ಮ ಸಾಂಗತ್ಯದಿಂದಾಗಿ ತೆಪ್ಪಯಾನ ಕೈಗೊಳ್ಳುವವರಿಗೆ ಅಭಯ ನೀಡಿ ಕೊಂಚ ತಾಪತ್ರಯವಿಲ್ಲದೇ ತೆಪ್ಪದ ಮುಖೇನ ನಡುಗಡ್ಡೆಗೆ ಕರೆದೊಯ್ಯುತ್ತಾರೆ. ಒಟ್ಟಾರೆಯಾಗಿ ದ್ವೀಪದಂತಿರುವ ಪರಿಸರದ ಪರಮ ಅಡ್ಡೆಯಾಗಿರುವ ಅಂಗೂರು ಗಡ್ಡೆಯ ಪ್ರಾಕೃತಿಕ ದಶ9ನ ಅವಿಸ್ಮರಣೀಯವಾದದ್ದು..ಈ ರಮಣೀಯ ತಾಣಕ್ಕೆ ಹೊಸಪೇಟೆ– ಹಡಗಲಿ, ದಾವಣಗೆರೆ– ಹರಪನಹಳ್ಳಿ, ಹಾವೇರಿ–ಗುತ್ತಲ ಮಾಗ9ವಾಗಿ ಭೇಟಿ ನೀಡಬಹುದು...ನಡುಗಡ್ಡೆಯು ಮನಮೋಹಕ ಹಸಿರು, ಜಲದೈಸಿರಿ ಭೇಟಿಯಿತ್ತವರನ್ನು ಪುಳಕಿತರನ್ನಾಗಿಸುವುದಲ್ಲದೇ ಮಂತ್ರ ಮುಗ್ಧರನ್ನಾಗಿಸುತ್ತದೆ.



ಎಸ್.ಎಚ್.ಸೋಮಶೇಖರ
ಶಿಕ್ಷಕರು.

Hampi Times E-paper
SCAN AND READ

# ಗ್ರಾಮ ದೇವತೆ ಜಾತ್ರೆಗೆ ಚಾಲನೆ ಸಿಂಗಾರಗೊಂಡ ಹರಪನಹಳ್ಳಿ



■ ಹಂಪಿ ಟೈಮ್ಸ್ ಹರಪನಹಳ್ಳಿ

9 ವರ್ಷಗಳ ನಂತರ ನಡೆಯುತ್ತಿರುವ ಗ್ರಾಮದೇವತೆ ಜಾತ್ರೆಗೆ ಸೋಮವಾರ ಚಾಲನೆ ದೊರೆತಿದ್ದು, ಊರಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

2015ರ ಮೇ ತಿಂಗಳಲ್ಲಿ ಹಲವಾಗಲು ಗ್ರಾಮದೇವತೆಯ ಜಾತ್ರೆ ನಡೆದಿತ್ತು. ಈ ಬಾರಿ ಮೇ 13 ರಿಂದ 17 ರವರೆಗೆ, ಜಾತ್ರೆ ನಡೆಯಲಿದ್ದು, ಒಟ್ಟು ಐದು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಾತ್ರೆ ಪ್ರಯುಕ್ತ ಗ್ರಾಮಸ್ಥರು ತಮ್ಮ ಮನೆಗಳಿಗೆ ಸುಣ್ಣಬಣ್ಣ ಬಳೆದು ಅಲಂಕರಿಸಿದ್ದಾರೆ. ಕಟ್ಟಡ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡವರು, ಹಬ್ಬದ ಸಲುವಾಗಿ ತ್ವರಿತವಾಗಿ ಮುಗಿಸಿಕೊಂಡಿದ್ದಾರೆ, ಇನ್ನೂ ಕೆಲವರು ತರಾತುರಿಯಲ್ಲಿ ಗೃಹ ಪ್ರವೇಶ ಕಾರ್ಯಕ್ರಮ ಆಯೋಜಿಸಿದ್ದರೆ, ಮದುವೆ ನಿಶ್ಚಯವಾಗಿರುವಂತ ಯುವ



ಜೋಡಿಗಳು ದಾಂಪತ್ಯಕ್ಕೆ ಕಾಲಿಡುತ್ತಿವೆ, ಮಹಿಳೆಯರು ತಮ್ಮ ಮನೆಗೆ ಬರುವ ಸಂಬಂಧಿಕರಿಗೆ ತಿಂಡಿ ತಿನಿಸುಗಳನ್ನು ತಯಾರಿಸುತ್ತಿದ್ದರೆ, ಬಹುತೇಕರು ಜಾತ್ರೆಯಲ್ಲೆ ನಿರತವಾಗಿರುವುದರಿಂದ ಕೂಲಿ ಕೆಲಸಕ್ಕೆ ಜನರೇ ಸಿಗದಂತಾಗಿದೆ.

**ಹಲವು ಕಾರ್ಯಕ್ರಮ:** ಗ್ರಾಮದ ಹೃದಯ ಭಾಗದಲ್ಲಿರುವ ಗ್ರಾಮದೇವತೆ ದೇವಸ್ಥಾನ ಸರ್ವಧರ್ಮಿಯರ ಶ್ರದ್ಧಾಕೇಂದ್ರವಾಗಿದೆ. ಪ್ರತಿ ಮಂಗಳವಾರ ಶುಕ್ರವಾರ, ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ, ಪೂಜಾ ಕೈಂಕರ್ಯ ಕೈಗೊಳ್ಳುತ್ತಾರೆ, ನಿತ್ಯ ಪೂಜೆ ಪುನಸ್ಕಾರಗಳು ನೆರವೇರುತ್ತವೆ.

ಸಾಮರಸ್ಯಕ್ಕೆ ಹೆಸರಾದ ಈ ಊರಿನ ಜಾತ್ರೆಯ ಕಾರ್ಯಕ್ರಮಗಳಲ್ಲಿ ವಾಡಿಕೆಗಿಂತ ಸರ್ವಧರ್ಮೀಯರೆ ಪಾಲ್ಗೊಂಡಿದ್ದಾರೆ. ಗ್ರಾಮದ ಊರಮ್ಮ ದೇವಿ ಸಮಿತಿಯವರು, ಅಗತ್ಯ ಸಿದ್ದತೆ ಕೈಗೊಂಡಿದ್ದಾರೆ, ದೇವಿಗೆ ಗ್ರಾಮಸ್ಥರಿಂದ ಉಡಿ ತುಂಬವುದು, ಮಾಂಗಲ್ಯ ಧಾರಣೆ, ಮತ್ತು ವಿಶೇಷ ಪೂಜೆ ಅಲಂಕಾರದಿಂದ ಊರಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಭವ್ಯ ಮೆರವಣಿಗೆಯ ಮೂಲಕ ಮತ್ತು ವಿಶೇಷವಾಗಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ದೀಪಾಲಂಕಾರದ ಚಪ್ಪರ ಹಾಸಿಗಾಗಿ ಸಮತ್ತು ಸಿಡಿಮದ್ದ ಸುಡುವುದಕ್ಕೆ ಲಕ್ಷಾಂತರ ರೂ. ಖರ್ಚು ಮಾಡಲಾಗಿದೆ. ಒಟ್ಟಾರೆ ದೇವಿಯು ಜಗಮಗಿಸುವ ದೀಪಾಲಂಕಾರದಿಂದ ವಿಜೃಂಭ ಣೆಯಿಂದ ಚೌತಿಮನೆ ಕಟ್ಟೆಗೆ ಪ್ರತಿಷ್ಠಾಪನೆ ಗೊಳ್ಳಲಿದೆ.

# ಶ್ರೀ ಶಂಕರಾಚಾರ್ಯರ ಜಯಂತಿ ಪುಷ್ಪ ನಮನ ಸಲ್ಲಿಕೆ

■ ಹಂಪಿ ಟೈಮ್ಸ್ ಕೊಪ್ಪಳ

ಶ್ರೀ ಶಂಕರಾಚಾರ್ಯ ಜಯಂತಿ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಶಂಕರಾಚಾರ್ಯರ ಭಾವಚಿತ್ರಕ್ಕೆ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ ಅವರು ಪುಷ್ಪ ನಮನ ಸಲ್ಲಿಸಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಮಾಜದ ಮುಖಂಡರಾದ ರಮೇಶ ಪದಕಿ, ರವಿ ಪುರೋಹಿತ, ಸತ್ಯನಾರಾಯಣ ಕುಲಕರ್ಣಿ, ನಾಗರಾಜ ಎಲ್ ದೇಸಾಯಿ, ರಮೇಶ ದೀಕ್ಷಿತ್, ಶಿಕ್ಷಣ ಇಲಾಖೆಯ ಅಯ್ಯನಗೌಡ, ಅಬಕಾರಿ ಇಲಾಖೆಯ ಇಸ್ಮಾಯಿಲ್, ವಾರ್ತಾ ಇಲಾಖೆಯ ಎಂ.ಪಾಂಡುರಂಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಶಂಕರ ಮತ್ತಣ್ಣ ಮತ್ತಿತರರಿದ್ದರು.

# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಲ್ಲಿ ವಿಕಲಚೇತನರಿಗೆ ಮೀಸಲಾತಿ

■ ಹಂಪಿ ಟೈಮ್ಸ್ ಕೊಪ್ಪಳ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಲ್ಲಿ ವಿಕಲಚೇತನರಿಗೆ ಶೇ.10 ರಷ್ಟು ಸ್ಥಾನಗಳನ್ನು ಮೀಸಲಿರಿಸಿ 6ನೇ ತರಗತಿ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳಡಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ 826 ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಡಾ.ಬಿ.ಆರ್. ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾಗಾಂಧಿ, ಏಕಲವ್ಯ ಮಾದರಿ ವಸತಿ ಶಾಲೆ/ಕಾಲೇಜುಗಳ ಪೈಕಿ 807 ವಸತಿ ಶಾಲೆಗಳಲ್ಲಿ ಶೇ.25 ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಎಚ್‌ಐವಿಗೆ ತುತ್ತಾಗಿರುವ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳಿಗೆ ಶೇ.10 ರಷ್ಟು ಸ್ಥಾನಗಳನ್ನು ಮೀಸಲಿರಿಸಿ, 6ನೇ ತರಗತಿ ಪ್ರವೇಶ ಕಲ್ಪಿಸಲು ಅನುಮೋದನೆ ದೊರೆತಿದ್ದು, ಜಿಲ್ಲೆಯ ವಿಕಲಚೇತನ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶ್ರೀದೇವಿ ಎಸ್.ಎನ್ ತಿಳಿಸಿದ್ದಾರೆ.

# ಮೇ.14 ರಿಂದ 16ರವರೆಗೆ ಇ.ಸಿ.ಓ ಹುದ್ದೆಗಳ ಪರೀಕ್ಷೆ: ನಿಷೇಧಾಜ್ಞೆ ಜಾರಿ

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲೆಯಲ್ಲಿ ಮೇ 14ರಿಂದ 16ರವರೆಗೆ ನಡೆಯಲಿರುವ ಸಿ.ಆರ್.ಪಿ, ಬಿ.ಆರ್.ಪಿ, ಶಿಕ್ಷಣ ಸಂಯೋಜಕರು (ಇ.ಸಿ.ಓ) ಹುದ್ದೆಗಳ ಪರೀಕ್ಷೆಗಳು ಸುಗಮ ಹಾಗೂ ಶಾಂತಿಯುತವಾಗಿ ನಡೆಯುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಬೆಳಿಗ್ಗೆ 10 ಗಂಟೆಯಿಂದ ಸಂಜೆ 04.30 ರವರೆಗೆ ಸಿಆರ್‌ಪಿಸಿ 1973 ಕಲಂ 144 ರನ್ವಯ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ನಲಿನ್ ಅತುಲ್ ಅವರು ಆದೇಶ ಹೊರಡಿಸಿದ್ದಾರೆ.

ಕೊಪ್ಪಳ ತಾಲ್ಲೂಕಿನ ಮುನಿರಾಬಾದ್‌ನ ಅನುದಾನಿತ ವಿಜಯನಗರ ಪ್ರೌಢಶಾಲೆ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರದಲ್ಲಿ ಯಾವುದೇ ರೀತಿಯ ಅಕ್ರಮ, ಅವ್ಯವಹಾರ ನಡೆಯದಂತೆ ಪರೀಕ್ಷಾ ಕೇಂದ್ರದ ಸುತ್ತಮುತ್ತಲಿನ 200 ಮೀಟರ್ ಅಂತರದ ಪ್ರದೇಶದಲ್ಲಿ ವಿವಿಧ ಷರತ್ತಿಗೆ ಒಳಪಟ್ಟು ನಿಷೇಧಾಜ್ಞೆಯನ್ನು ಜಾರಿಗೊಳಿಸಲಾಗಿದೆ.

ಆದೇಶದನ್ವಯ ನಿಷೇಧಿತ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಎಸ್.ಟಿ.ಡಿ, ಮೊಬೈಲ್ ಪೇಜರ್, ಜೆರಾಕ್ಸ್, ಟೈಪಿಂಗ್ ಮುಂತಾದವುಗಳನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದ ಹಾಗೂ ನಿಯೋಜಿತ ಶಿಕ್ಷಕರನ್ನು, ಜಾಗೃತ ದಳದವರನ್ನು ಹೊರತುಪಡಿಸಿ ಇನ್ನುಳಿದವರಿಗೆ ಪರವಾನಿಗೆ ಇಲ್ಲದೇ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶ ಮಾಡುವುದನ್ನು ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಅಂತರದಲ್ಲಿ ಜನರು ಮಾರಕಾಸ್ತ್ರಗಳನ್ನು ಹಿಡಿದು ತಿರುಗಾಡುವುದನ್ನು ನಿಷೇಧಿಸಿದೆ. ಈ ಆದೇಶವು ಮದುವೆ, ಶವ ಸಂಸ್ಕಾರಗಳು ಹಾಗೂ ಇನ್ನಿತರ ಧಾರ್ಮಿಕ ಕಾರ್ಯಕ್ರಮಗಳಿಗೆ ಅನ್ವಯವಾಗುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಆದೇಶದಲ್ಲಿ ತಿಳಿಸಿದ್ದಾರೆ.

ವಿಜಯನಗರ ಜಿಲ್ಲೆಯಲ್ಲಿ ಬೆಳೆ, ಮನೆಗಳಿಗೆ ಮಳೆಯಿಂದ ಹಾನಿಯಾಗಿದ್ದಲ್ಲಿ ಫೋಟೋಗಳನ್ನು ಸಂಕ್ಷಿಪ್ತ ಮಾಹಿತಿಯೊಂದಿಗೆ ಹಂಪಿ ಟೈಮ್ಸ್‌ಗೆ ಕಳುಹಿಸಿ

**94486 33038**

ಹಂಪಿ ಟೈಮ್ಸ್
HAMPI TIMES


ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ
ತೆಂಗಿನಕಾಯಿ, ಬಾಳೆ ಹಣ್ಣು, ತಾಜಾ ನುಗ್ಗೆಕಾಯಿ ಮತ್ತು
ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿರಿ
Organic Coconut & Banana, Moringa oleifera Available in best Price
98458 65204 ಮೃತ್ಯುಂಜಯನಗರ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**14–05–2024 – ಮಂಗಳವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪುಷ್ಯ |
| ಯೋಗ | : ಗಂಡ |
| ಕರಣ | : ಗರಜ |
| ಸೂರ್ಯೋದಯ | : 05:47:22 |
| ಸೂರ್ಯಾಸ್ತ | : 18:59:28 |
| ರಾಹು | : 15:41–17:20 |
| ಯಮಘಂಡ | : 09:05–10:44 |
| ಗುಳಿಕ | : 12:23–14:02 |

## ತುಂಗಭದ್ರಾ ನೀರಿನ ಮಟ್ಟ



**ಸೋಮವಾರ : 13–05–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.64 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 13 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.431 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.8 ಅಡಿ |
| ಒಳ ಹರಿವು | 1129 ಕ್ಯುಸೆಕ್ |
| ಹೊರ ಹರಿವು | 201 ಕ್ಯುಸೆಕ್ |
| ಸಾಮರ್ಥ್ಯ | 3.801 ಟಿಎಂಸಿ |

# ರಾಜ್ಯ ಸುಭೀಕ್ಷೆಗಾಗಿ ಶಿಖರಕ್ಕೆ ತೈಲಾಭಿಷೇಕ

### ಉಜ್ಜಿನ ಶ್ರೀಗಳ ಹೇಳಿಕೆ । ಹಿಂದಿನ ಲಿಂಗೈಕ್ಯ ಜಗದ್ಗುರುಗಳ ಧಾರ್ಮಿಕ ಪದ್ಧತಿಯಂತೆ ಇಂದಿಗೂ ಶಿಖರಕ್ಕೆ ತೈಲಾಭಿಷೇಕ

■ **ಹಂಪಿ ಟೈಮ್ಸ್ ಕೊಟ್ಟೂರು**

ಜಗತ್ತಿನಲ್ಲಿಯೇ ಅಪರೂಪವಾದ ಮತ್ತು ವಿಶಿಷ್ಟವಾದ ಶಿಖರ ತೈಲಾಭಿಷೇಕ ವೀಕ್ಷಿಸುವುದಾದರೆ ಅದು ಉಜ್ಜಿನಿ ಶ್ರೀ ಜಗದ್ಗುರು ಸದ್ಧರ್ಮ ಪೀಠದಲ್ಲಿ ಮಾತ್ರ, ಇಲ್ಲಿ ಹಿಂದಿನ ಲಿಂಗೈಕ್ಯ ಜಗದ್ಗುರುಗಳು ನಡೆಸಿಕೊಂಡು ಬಂದ ಧಾರ್ಮಿಕ ಪದ್ಧತಿಯಂತೆ ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಶಿಖರಕ್ಕೆ ತೈಲಾಭಿಷೇಕ ನಡೆಯುತ್ತಿದೆ ಎಂದು ಶ್ರೀ ಜಗದ್ಗುರು ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ಸೋಮವಾರ ತೈಲಾಭಿಷೇಕ ನಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ನಾಡಿನಲ್ಲಿ ದೀಪಕ್ಕೆ ಮತ್ತು ಮೂರ್ತಿಗೆ ಎಣ್ಣಿ, ಕ್ಷೀರ ಮಜ್ಜನ, ಜಲ ಮಜ್ಜನ ನಡೆದಿರುವುದನ್ನು ನೋಡಿದ್ದೇವೆ ಆದರೆ ಶಿಖರಕ್ಕೆ ಸಾವಿರಾರು ಲೀಟರ್ ತೈಲಾಭಿಷೇಕ ನಡೆಯುವುದು ಉಜ್ಜಿನಿಯಲ್ಲಿ ಮಾತ್ರ. ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಶಿಖರಕ್ಕೆ ತೈಲಾಭಿಷೇಕದ ಮೊದಲ ಹಿನ್ನೆಲೆ ಏನೆಂದರೆ ಐತಿಹಾಸಿಕ ಪ್ರಕಾರ ಮೂಲ ಕಾಳಿಕ ಉಜ್ಜಿನಿಯಲ್ಲಿ ರಾಜ ವಿಕ್ರಮಾದಿತ್ಯನಿಗೆ ಶನಿದೋಷ ಬಂದಾಗ, ಅಲ್ಲಿನ ರಾಣಿ ಪರಿವಾರವು ಶ್ರೀ ಸ್ವಾಮಿಯಲ್ಲಿ ಮೊರೆ ಹೋದ ಸಂದರ್ಭದಲ್ಲಿ ಶನಿದೇವನಿಗೆ ಇಷ್ಟವಾದದ್ದು ತೈಲ, ಇದನ್ನು ವಿಕ್ರಮಾದಿತ್ಯನ ಹೆಸರಿನಲ್ಲಿ ಶಿವ ಸಂಕಲ್ಪ ಮಾಡಿ



ಇಷ್ಟಲಿಂಗಕ್ಕೆ ಅಭಿಷೇಕ್ ಮಾಡಿ ರಾಜನಿಗಿದ್ದ ಶನಿ ದೋಷ ದೂರವಾಗುತ್ತೆ ಎಂಬ ವಿಷಯ ಇತಿಹಾಸದಲ್ಲಿ ಅವಲೋಕಿಸುತ್ತೇವೆ ಎಂದು ಹೇಳಿದರು.

ನಿನ್ನೊಬ್ಬರ ಹೆಸರಿನಲ್ಲಿ ಶಿವಸಂಕಲ್ಪ ಮಾಡಿ ತೈಲಾಭಿಷೇಕ ಮಾಡಿದ್ದರ ಪರಿಣಾಮವಾಗಿ ಶನಿದೋಷ ದೂರವಾಗಿದೆ ಇಂದಿನಿಂದ ವೈಶಾಖ ಪಂಚಮಿಯಂದು ಮರುಳಸಿದ್ದೇಶ್ವರ ಸ್ವಾಮಿಯ ಶಿಖರಕ್ಕೆ ತೈಲಾಭಿಷೇಕ ಮಾಡಿಕೊಂಡು ಬರುತ್ತಿದ್ದದ್ದೇ ಆದರೆ ರಾಜ್ಯದ ಶನಿ ದೋಷ ನಿವಾರಣೆ ಆಗುತ್ತೆ, ರಾಜ್ಯ ಸುಭೀಕ್ಷೆಯಿಂದ, ಸಂಪತ್ತು ಬರಿತವಾಗಿರುತ್ತೆ ಎಂದು ಆಶೀರ್ವಾದ ಮಾಡಿದ್ದರಿಂದ ವಿಕ್ರಮ ಶಕೆಯಿಂದ ಪ್ರಾರಂಭ ಆಗಿರುವ ತೈಲಾಭಿಷೇಕ ಇಂದಿಗೂ ನಿರರ್ಗಳವಾಗಿ ನಡೆದುಕೊಂಡು ಬಂದಿದೆ ಎಂದು ವಿವರಿಸಿದರು.

ಇದರ ಜೊತೆಗೆ ಇನ್ನೊಂದು ಹಿನ್ನೆಲೆ ಏನೆಂದರೆ ಶ್ರೀ ಉಜ್ಜಿನಿ ಮರುಳಸಿದ್ದೇಶ್ವರ ಸ್ವಾಮಿಯ ದೇವಸ್ಥಾನ ಜರ್ಮಲಿ ಪಾಳೆಗಾರರ ಆಡಳಿತ ಪ್ರದೇಶಕ್ಕೆ ಒಳಪಟ್ಟ ಕಾರಣ ಅವರು ಮಾಡಿದ ತಪ್ಪನ್ನ ಮನ್ನಿಸಲು ಜಗದ್ಗುರುಗಳು ಆದೇಶ ಮಾಡಿದುದ್ದರ ಹಿನ್ನೆಲೆಯಾಗಿ ಶಿಖರಕ್ಕೆ ತೈಲಾಭಿಷೇಕ ನಡೆದುಕೊಂಡು ಬಂದಿದೆ ಎಂಬುದನ್ನ ಉಲ್ಲೇಖದಲ್ಲಿ ಕಾಣುತ್ತೇವೆ ಎಂದು ಹೇಳಿ ಒಟ್ಟಾರೆ ಜಗತ್ತಿನಲ್ಲಿ ವಿಶಿಷ್ಠವಾದ ಶಿಖರ ತೈಲಾಭಿಷೇಕ ನೋಡುವುದಾದರೆ ಅದು ಉಜ್ಜಿನಿ ಸದ್ಧರ್ಮ ಪೀಠದಲ್ಲಿ ಮಾತ್ರ. ಶಿಖರ ತೈಲಾಭಿಷೇಕದಿಂದ ನಾಡಿನಾದ್ಯಂತ ಮಳೆ, ಬಳೆ ಉತ್ತಮವಾಗಿ ಜನರು ಸಂವೃದ್ಧವಾಗಿ, ಆರೋಗ್ಯದಿಂದ ಬದುಕುತ್ತಾರೆ ಎಂಬುದು ಹಿಂದಿನಿಂದಲೂ ನಡೆದುಕೊಂಡು ಬಂದಿರುವ ವಾಡಿಕೆ ಎಂದು ಹೇಳಿದರು.

ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಶಿಖರಕ್ಕೆ ತೈಲ ತರುವ ಜರ್ಮಲಿ ಪಾಳೇಗಾರರ ವಂಶಸ್ಥರಿಗೆ ಹಾಗೂ ಅವರ ಸೇವಕರಿಗೆ, ವಿಶೇಷ ಗೌರವ ಮತ್ತು ಅತ್ಯುನ್ನತ ಅವಕಾಶವನ್ನು ಶ್ರೀ ಉಜ್ಜಿನಿ ಸದ್ಧರ್ಮ ಪೀಠವು ನೀಡಿದೆ ಎಂದು ತಿಳಿಸಿದರು. ಈ ವೇಳೆ ಹರಪನಹಳ್ಳಿ ತೆಗ್ಗಿನಮಠದ ಶಿವಾಚಾರ್ಯ ಸ್ವಾಮಿಗಳು, ಬೆಣ್ಣಿಹಳ್ಳಿ ಪಂಚಾಕ್ಷರಿ ಸ್ವಾಮಿಗಳು ಹಾಗೂ ವಿವಿಧ ಮಠದೀಶರರು ಜೊತೆಯಲ್ಲಿ ಇದ್ದರು.

# ಮಕ್ಕಳಿಗೆ ಪ್ರತಿ ಆರು ತಿಂಗಳಿಗೊಮ್ಮೆ ಜಂತುಹುಳು ನಿವಾರಕ ಮಾತ್ರೆ ಹಾಕಿ

■ **ಹಂಪಿ ಟೈಮ್ಸ್ ಬಳ್ಳಾರಿ**

ಮಗುವಿನ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿ ಪ್ರತಿ 06 ತಿಂಗಳಿಗೊಮ್ಮೆ ತಪ್ಪದೇ 2 ರಿಂದ 16 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಿವಾರಕ ಮಾತ್ರೆಗಳನ್ನು ಪಾಲಕರು ಕೊಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್‌ಬಾಬು ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಶ್ರಯದಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಡಿ ಕೌಲ್‌ಬಜಾರ್‌ನ ಬ್ರೂಸ್‌ಪೇಟೆ ನಗರ ಆರೋಗ್ಯ ಕೇಂದ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಮುದಾಯ ಆಧಾರಿತ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಮಕ್ಕಳ ಬೆಳವಣಿಗೆಯ ಆರಂಭದಲ್ಲಿಯೇ ರಕ್ತಹೀನತೆಯನ್ನು ಗುರುತಿಸುವುದರಿಂದ ದೇಹದ ಬೆಳವಣಿಗೆಗೆ ಆಗುವ ಕುಂಠಿತ ತೊಂದರೆಗಳು ಹಾಗೂ ಇತರೆ ಸಾಮಾನ್ಯ ತೊಂದರೆಗಳನ್ನು ಗುರುತಿಸಿ ಮಗುವಿನ ಬಾಲ್ಯವನ್ನು ಸದೃಢಗೊಳಿಸಲು 01 ರಿಂದ 02 ವರ್ಷದೊಳಗಿನ ಮಕ್ಕಳಿಗೆ 200 ಮಿಲಿಗ್ರಾಂ ಮಾತ್ರೆ ಹಾಗೂ 2 ರಿಂದ 16 ವರ್ಷದೊಳಗಿನ ಮಕ್ಕಳಿಗೆ 400 ಮಿಲಿಗ್ರಾಂ ಮಾತ್ರೆಗಳನ್ನು ಮಗುವಿಗೆ ಚೀಪಿಸಲು ಕೊಡಲು ಎಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಲಭ್ಯವಿದ್ದು, ಎಲ್ಲಾ ಪಾಲಕರು ಇದರ ಸದುಪಯೋಗ ಪಡೆದುಕೊಂಡು ಮಗುವಿನ ಸದೃಢ ಆರೋಗ್ಯಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ಹನುಮಂತಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ ಎಲ್ಲಾ



ಗ್ರಾಮ, ಪಟ್ಟಣ ಹಾಗೂ ನಗರಗಳಲ್ಲಿ ಮಾತ್ರೆಗಳನ್ನು ವಿತರಿಸಲು ತಂಡಗಳನ್ನು ರಚಿಸಲಾಗಿದ್ದು, ಮೇ 13 ರಿಂದ 23 ರವರೆಗೆ ಆರೋಗ್ಯ ಇಲಾಖೆಯ ವೈದ್ಯಕೀಯ ತಂಡದವರು ಆಗಮಿಸಿ ಮಾತ್ರೆಗಳನ್ನು ಚೀಪಿಸಲು ಬಂದಾಗ ಪಾಲಕರು ಸಹಕರಿಸಬೇಕು ಎಂದು ವಿನಂತಿಸಿದರು.

ಕ್ಷೇತ್ರ ಸಿಬ್ಬಂದಿ ಹಾಗೂ ಆಶಾ ಕಾರ್ಯಕರ್ತೆಯರನ್ನೊಳಗೊಂಡ ವೈದ್ಯಕೀಯ ತಂಡವು ಜಿಲ್ಲೆಯ ಪ್ರತಿ ಮನೆ ಮನೆಯ ಭೇಟಿಯ ಮೂಲಕ 4,05,388 ಮಕ್ಕಳಿಗೆ ಜಂತುಹುಳು ನಿವಾರಕ ಆಲ್ಬಂಡೋಜೋಲ್ ಮಾತ್ರೆಗಳನ್ನು 1 ರಿಂದ 16 ವರ್ಷ ವಯಸ್ಸಿನ ಮಕ್ಕಳಿಗೆ ಮನೆಗಳಲ್ಲಿಯೇ ವಿತರಿಸಲಿದ್ದು, ಮಗುವಿಗೆ ಯಾವುದೇ ಕಾರಣಕ್ಕೂ ನುಂಗಿಸದೇ ಮಾತ್ರೆಗಳನ್ನು ಚೀಪಿಸಲು ತಿಳಿಸಬೇಕು ಎಂದು ವಿನಂತಿಸಿದರು.

# ಕೇಸರ್ ಮಾವಿಗೆ ಹೆಚ್ಚಿದ ಬೇಡಿಕೆ

**ಮೊದಲ ಪುಟದಿಂದ**

ಸಾರ್ವಜನಿಕರು ಮಾವು ಮೇಳದಲ್ಲಿ ಭಾಗವಹಿಸಿ ರೈತರ ಆದಾಯ ಹೆಚ್ಚಿಸಬೇಕು.

22 ಕ್ಕೂ ಹೆಚ್ಚಿನ ಸ್ಟಾಲ್‌ಗಳ ವ್ಯವಸ್ಥೆ: ಈ ಮೇಳದಲ್ಲಿ ಭಾಗವಹಿಸಲು 55 ಕ್ಕೂ ಹೆಚ್ಚಿನ ರೈತರು ನೋಂದಾಯಿಸಿರುತ್ತಾರೆ. ರೈತರಿಗಾಗಿ ಉಚಿತವಾಗಿ 22 ಕ್ಕೂ ಹೆಚ್ಚಿನ ಸ್ಟಾಲ್‌ಗಳನ್ನು ನಿರ್ಮಿಸಿ ಕೊಡಲಾಗಿದೆ ಮತ್ತು ಪ್ರದರ್ಶನದಲ್ಲಿ 100 ಕ್ಕೂ ಹೆಚ್ಚಿನ ದೇಶಿ ಮತ್ತು ವಿದೇಶಿ ಮಾವಿನ ತಳಿಗಳನ್ನು ಸುಸಜ್ಜಿತವಾಗಿ ಪ್ರದರ್ಶನದಲ್ಲಿ ಇಡಲಾಗಿದೆ. 10 ಕ್ಕೂ ಹೆಚ್ಚಿನ ತೋಟಗಾರಿಕೆ ರೈತ ಉತ್ಪಾದಕ ಕಂಪನಿಗಳಲ್ಲದೇ ಜಿಲ್ಲಾ ಹಾಪ್‌ಕಾಮ್ಸ್ ಸಂಸ್ಥೆಗಳಿಗೆ ಮಾವಿನ ಹಣ್ಣು ಮಾರಲು ಸ್ಟಾಲ್‌ಗಳ ವ್ಯವಸ್ಥೆ ಮಾಡಲಾಗಿದೆ. ರೈತ ಉತ್ಪಾದಕ ಕಂಪನಿಗಳು ಹಾಗೂ ಜಿಲ್ಲಾ ಹಾಪ್‌ಕಾಮ್ಸ್ ಕೊಪ್ಪಳದ ಸದಸ್ಯ ರೈತರಿಂದ ಮಾವಿನ ಹಣ್ಣುಗಳನ್ನು ಖರೀದಿಸಿ ಈ ಮೇಳದಲ್ಲಿ ಮಾರಾಟ ಮಾಡುವುದರಿಂದ ಈ ಮೇಳದಲ್ಲಿ ನೇರವಾಗಿ ಭಾಗವಹಿಸದ ರೈತರಿಗೂ ಅನುಕೂಲವಾಗಿ ಯೋಗ್ಯ ಬೆಲೆ ಸಿಗುವಂತಾಗಿದೆ. ಈ ಮೇಳದಲ್ಲಿ ಮಾವು ಬೆಳೆಯಲು ಆಸಕ್ತಿ ಹೊಂದಿದ ರೈತರಿಗೆ ಮಾವನ್ನು ಬೆಳೆಯುವ ಬಗ್ಗೆ ಹಾಗೂ ಮಾರುಕಟ್ಟೆ, ಗುಣಮಟ್ಟದ ಮಾವು ಮತ್ತು ಇಳುವರಿ ಹೇಗೆ ತೆಗೆಯಬೇಕು ಎಂಬುದರ ಬಗ್ಗೆಯೂ ತಿಳಿಸಿಕೊಡಲಾಗುತ್ತಿದೆ ಹಾಗೂ ಸಾವಯವ ಪದ್ದತಿಯಲ್ಲಿ ಮಾವು ಬೆಳೆಯುವ ಬಗ್ಗೆ ಹಾಗೂ ವಿವಿಧ ವಿದೇಶಿ ಮಾರುಕಟ್ಟೆಗಳಿಗೆ ರಫ್ತು ಮಾಡುವ ಕುರಿತು ಮಾಹಿತಿಯನ್ನು ಸಹ ನೀಡಲಾಗುತ್ತಿದೆ.

**ಕೊಪ್ಪಳ ಕೇಸರ್ ಮಾವಿನ ಹಣ್ಣುಗಳಿಗೆ ಹೆಚ್ಚಿನ ಬೇಡಿಕೆ:** "ಕೊಪ್ಪಳ ಕೇಸರ್ ಮಾವು" ಬ್ರ್ಯಾಂಡ್‌ನ ಬಾಕ್ಸ್‌ನಲ್ಲಿನ ಕೊಪ್ಪಳ ಕೇಸರ್ ಮಾವಿನ ಹಣ್ಣುಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಸಾರ್ವಜನಿಕರಿಗೆ ಬಾಕ್ಸ್‌ನಲ್ಲಿನ ಹಣ್ಣುಗಳು ಸಿಗುವಂತೆ ಅನುಕೂಲ ಮಾಡಲಾಗಿದೆ. ಈ ಬಾರಿ ಮೇಳವನ್ನು ಪ್ಲಾಸ್ಟಿಕ್ ಮುಕ್ತವಾಗಿಡುವ ಉದ್ದೇಶದಿಂದ ಸಾರ್ವಜನಿಕರಿಗೆ ಹಣ್ಣುಗಳನ್ನು ತೆಗೆದುಕೊಂಡು ಹೋಗಲು ಅನುಕೂಲವಾಗುವಂತೆ ತೋಟಗಾರಿಕೆ ಇಲಾಖೆಯಿಂದ ಪೇಪರ್ ಬ್ಯಾಗ್‌ಗಳನ್ನು ನೀಡಲಾಗಿದೆ. ಇದರಿಂದ ಕೊಪ್ಪಳ ಕೇಸರ್ ಹೆಚ್ಚು ಜನಪ್ರಿಯವಾಗಿದೆ, ಅಲ್ಲದೇ ಸಾರ್ವಜನಿಕರು ಪೇಪರ್ ಬ್ಯಾಗ್‌ಗಳನ್ನು ಮೆಚ್ಚಿಕೊಂಡಿರುತ್ತಾರೆ.

**ಅತ್ಯಾಕರ್ಷಣೆಯ ಸೆಲ್ಫಿ ಪಾಯಿಂಟ್:** ಮಾವಿನ ಹಣ್ಣುಗಳಲ್ಲಿ ಲಭ್ಯವಿರುವ ಪೋಷಕಾಂಶಗಳು, ಖನಿಜಗಳು ಮತ್ತು ಅವುಗಳ ಆರೋಗ್ಯದ ಬಗ್ಗೆ ಮಹತ್ವ ತಿಳಿಸುವ ಬ್ಯಾನರ್‌ಗಳನ್ನು ಈ ಮೇಳದಲ್ಲಿ ಪ್ರದರ್ಶಿಸಲಾಗುತ್ತಿದ್ದು, ಗ್ರಾಹಕರಿಗೆ ಇದೊಂದು ವಿಶಿಷ್ಟ ಅನುಭವ ನೀಡಬಲ್ಲದಾಗಿದೆ. ಈ ಮೇಳದಲ್ಲಿ ಮಕ್ಕಳು ಮತ್ತು ಸಾರ್ವಜನಿಕರಿಗೆ ಸೆಲ್ಫಿ ಪಾಯಿಂಟ್ ನಿರ್ಮಿಸಲಾಗಿದೆ, ಈ ಸೆಲ್ಫಿ ಪಾಯಿಂಟ್ ಮಾವಿನ ಮಾದರಿ ಹೊಂದಿದ್ದು ಅತ್ಯಾಕರ್ಷಣೀಯವಾಗಿ ಜನರನ್ನು ಆಕರ್ಷಿಸುತ್ತಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ.ಕಡಿ, ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕರಾದ ಕೃಷ್ಣ ಸಿ.ಉಕ್ಕುಂದ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿಜ್ಞಾನ

# ಕೋಳಿಗಳು ಏಕೆ ಹಗಲಿನಲ್ಲಿ ಮಾತ್ರ ಮೊಟ್ಟೆ ಇಡುತ್ತವೆ?

■ **ಆರ್.ಬಿ.ಗುರುಬಸವರಾಜ**

ಮಲ್ಲಿಗಿ ಮತ್ತು ಭೂಮಿಕ ವಿಜ್ಞಾನ ಪಠ್ಯ ವಿಷಯದ ಚರ್ಚೆಯಲ್ಲಿ ತೊಡಗಿದ್ದರು. ಮೊಟ್ಟೆ ಇಡುವ ಮತ್ತು ಮೊಟ್ಟೆ ಇಡದ ಪಕ್ಷಿಗಳ ಬಗ್ಗೆ ಚರ್ಚಿಸುತ್ತಿರು. ಇಬ್ಬರೂ ಪ್ರತ್ಯೇಕವಾಗಿ ಮೊಟ್ಟೆ ಇಡುವ ಮತ್ತು ಮೊಟ್ಟೆ ಇಡದ ಪಕ್ಷಿಗಳ ಹೆಸರುಗಳನ್ನು ಪಟ್ಟಿ ಮಾಡಿದರು. ಮೊಟ್ಟೆ ಇಡುವ ಪಕ್ಷಿಗಳ ಪಟ್ಟಿಯಲ್ಲಿ ಕೋಳಿಯೂ ಇತ್ತು. ಆಗ ಅಲ್ಲಿಗೆ ಬಂದ ಕಾದಂಬರಿ ಇವರಿಬ್ಬರ ಚರ್ಚೆಯಲ್ಲಿ ಪಾಲ್ಗೊಂಡಳು. ನಂತರ ಕಾದಂಬರಿ ಕೇಳಿದ ಪ್ರಶ್ನೆಗೆ ಇಬ್ಬರ ಬಳಿಯೂ ಉತ್ತರ ಇರಲಿಲ್ಲ. ಮೂವರೂ ತಮ್ಮ ಪ್ರಶ್ನೆಯನ್ನು ಶಿಕ್ಷಕರ ಬಳಿ ಪ್ರಸ್ತಾಪಿಸಿ ಉತ್ತರ ಪಡೆದರು. ಹಾಗಾದರೆ ಅವರು ಕೇಳಿದ ಪ್ರಶ್ನೆ ಯಾವುದು ಎಂಬುದು ನಿಮಗೆ ತಿಳಿದಿರಬಹುದು ಅಲ್ಲವೇ? ಹೌದು "ಕೋಳಿಗಳು ಏಕೆ



ಹಗಲಿನಲ್ಲಿ ಮಾತ್ರ ಮೊಟ್ಟೆ ಇಡುತ್ತವೆ?" ಎಂಬುದು ಅವರ ಪ್ರಶ್ನೆ.

ಕೋಳಿಗಳು ಹಗಲು ಹೊತ್ತಿನಲ್ಲಿ ಮೊಟ್ಟೆಗಳನ್ನು ಇಡಲು ವಿಕಸನಗೊಂಡಿವೆ. ಇದು ಕೋಳಿಗಳ ನೈಸರ್ಗಿಕ ಪ್ರತಿಕ್ರಿಯೆಯಾಗಿದ್ದು, ಮೊಟ್ಟೆ ಇಡುವುದು ಸೇರಿದಂತೆ ಕೋಳಿಯ ಸಂತಾನೋತ್ಪತ್ತಿ ಚಕ್ರವನ್ನು ನಿಯಂತ್ರಿಸುವಲ್ಲಿ ಬೆಳಕು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಕೋಳಿಗಳು 'ಸಿರ್ಕಾಡಿಯನ್ ರಿದಮ್' ಎಂದು ಕರೆಯಲ್ಪಡುವ ಆಂತರಿಕ ಜೈವಿಕ ಗಡಿಯಾರವನ್ನು ಹೊಂದಿವೆ. ಇದು ಪರಿಸರದ ಬೆಳಕು ಮತ್ತು ಜೀವನ ಚಕ್ರದೊಂದಿಗೆ ಹೊಂದಿಕೊಂಡಿದೆ.

ನಿರ್ದಿಷ್ಟವಾಗಿ ಹೇಳುವುದಾದರೆ ಕೋಳಿಗಳ ಮೊಟ್ಟೆಯಿಡುವ ಚಕ್ರವು ಹಗಲಿನ ಬೆಳಕಿನಿಂದ ನಿಯಂತ್ರಿತವಾಗಿದೆ. ಕೋಳಿಗಳು ತಮ್ಮ ಮೆದುಳಿನಲ್ಲಿ 'ಪೀನಲ್ ಗ್ರಂಥಿ' ಎಂಬ ರಚನೆಯನ್ನು ಹೊಂದಿವೆ. ಇದು 'ಮೆಲಟೋನಿನ್' ಹಾರ್ಮೋನ್‌ನ್ನು ಉತ್ಪಾದಿಸುತ್ತದೆ. ಮೆಲಟೋನಿನ್ ಉತ್ಪಾದನೆಯು ಬೆಳಕಿಗೆ ಒಡ್ಡಿಕೊಳ್ಳುವುದರಿಂದ ಮಾತ್ರ ಉತ್ತೇಜಕಗೊಳ್ಳುತ್ತದೆ ಮತ್ತು ಇದು 'ಲ್ಯುಟೈನೈಜಿಂಗ್ ಹಾರ್ಮೋನ್' ಎಂಬ ಮತ್ತೊಂದು ಹಾರ್ಮೋನ್ ಬಿಡುಗಡೆಯನ್ನು ಪ್ರಚೋದಿಸುತ್ತದೆ. ಲ್ಯುಟೈನೈಜಿಂಗ್ ಹಾರ್ಮೋನ್ ಕೋಳಿಯ ಅಂಡಾಶಯದಲ್ಲಿನ ಕಿರುಚೀಲಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ಮೊಟ್ಟೆಯ ಉತ್ಪಾದನೆಗೆ ಕಾರಣವಾಗುತ್ತದೆ.

ಇದಲ್ಲದೆ ಹಗಲು ಹೊತ್ತಿನಲ್ಲಿ ಮೊಟ್ಟೆಗಳನ್ನು ಇಡುವುದರಿಂದ ಪರಭಕ್ಷಕಗಳಿಂದ ಸಂಭಾವ್ಯ ಹಾನಿಯಿಂದ ತಮ್ಮ ಮೊಟ್ಟೆಗಳನ್ನು ಮತ್ತು ಸಂತತಿಯನ್ನು ರಕ್ಷಿಸಲು ಅನುವು ಮಾಡಿಕೊಡುತ್ತದೆ. ವಾಣಿಜ್ಯ ಉದ್ದೇಶಕ್ಕಾಗಿ ಬೆಳೆಸಿದ ಕೋಳಿಗಳಲ್ಲಿ ಕೃತಕ ಬೆಳಕಿನ ಮೂಲಕ ಮೊಟ್ಟೆ ಉತ್ಪಾದಿಸಲಾಗುತ್ತದೆ. ಆದರೆ ಕೃತಕ ಬೆಳಕಿಗೆ ಕೋಳಿಗಳು ಹೆಚ್ಚು ಒತ್ತಡ ಅನುಭವಿಸುತ್ತವೆ.

# ಸೊನ್ನ ಸರ್ಕಾರಿ ಪ್ರೌಢಶಾಲೆಗೆ ಎಚ್.ಎಂ.ಸ್ಫೂರ್ತಿ ಪ್ರಥಮ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**



ತಾಲೂಕಿನ ಸೊನ್ನದ ಸರ್ಕಾರಿ ಪ್ರೌಢಶಾಲೆಯಲ್ಲಿ 2023–24ನೇ ಎಸ್.ಎಸ್.ಎಲ್.ಸಿ ಫಲಿತಾಂಶದಲ್ಲಿ, ಹಿರೇಮಠದ ಸ್ಫೂರ್ತಿ 625ಕ್ಕೆ 522 ಅಂಕಗಳನ್ನು ಪಡೆಯುವ ಮೂಲಕ, ಶಾಲೆಗೆ ಪ್ರಥಮ ಸ್ಥಾನದಲ್ಲಿದ್ದಾರೆ ಎಂದು ಶಾಲೆಯ ಮುಖ್ಯ ಶಿಕ್ಷಕ ಎಲ್.ಕೃಷ್ಣನಾಯ್ಕ್ ತಿಳಿಸಿದರು.

ವಿದ್ಯಾರ್ಥಿನಿ ಸ್ಫೂರ್ತಿ ಗ್ರಾಮದ ರೈತರಾದ ಎಚ್.ಎಂ.ನಂದಿನಿ ಹಾಗೂ ಎಚ್.ಎಂ.ವೀರಯ್ಯ ದಂಪತಿಗಳ ಪುತ್ರಿಯಾಗಿದ್ದು, ಉತ್ತಮ ಅಂಕಗಳನ್ನು ಪಡೆಯುವ ಮೂಲಕ ಕನ್ನಡ ಶಾಲೆಗೂ, ಗ್ರಾಮಕ್ಕೂ ಕೀರ್ತಿತಂದಿದ್ದಾರೆ ಎಂದರು. ಈ ವರ್ಷ ಶಾಲೆಯ 64 ವಿದ್ಯಾರ್ಥಿಗಳ ಪೈಕಿ 53ವಿದ್ಯಾರ್ಥಿಗಳು ತೇರ್ಗಡೆಯಾಗಿ ಶೇ.83ರಷ್ಟು ಫಲಿತಾಂಶ ಬಂದಿದೆ ಎಂದರು. ಸರ್ಕಾರಿ ಶಾಲೆಯ ಮಕ್ಕಳ ಸಾಧನೆಗೆ ಶಾಲೆಯ ಮುಖ್ಯ ಶಿಕ್ಷಕ, ಸಿಬ್ಬಂದಿ, ಎಸ್.ಡಿ.ಎಂ.ಸಿ ಪದಾಧಿಕಾರಿ ಗಳು ಹರ್ಷ ವ್ಯಕ್ತಪಡಿಸಿದ್ದಾರೆ.

# ಡೆಮಾಕ್ರಸಿ ಇನ್ ಆಕ್ಷನ್ ಛಾಯಾಗ್ರಹಣ ಸ್ಪರ್ಧೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಪ್ರಜಾಪ್ರಭುತ್ವದ ಮಹದಾದ ಹಬ್ಬವಾದ ಮತದಾನ ವಿಷಯದ ಕುರಿತು ಡೆಮಾಕ್ರಸಿ ಇನ್ ಆಕ್ಷನ್ ಛಾಯಾಗ್ರಹಣ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಏಪ್ರೀಲ್ 26 ಮತ್ತು ಮೇ 7 ರಂದು ನಡೆದ ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಮತದಾನದ ಕುರಿತು ತಾವು ತೆಗೆದಂತಹ ಗರಿಷ್ಠ 5 ಅತ್ಯುತ್ತಮ ಛಾಯಾಚಿತ್ರಗಳನ್ನು ಸೂಕ್ತ ಶೀರ್ಷಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೀಡಿರುವ ಅಕ್ರಿಡಿಷಿನ್ ಕಾರ್ಡ್ ಅಥವಾ ಮಾಧ್ಯಮ ಸಂಸ್ಥೆ ನೀಡಿರುವ ಐಡಿ ಕಾರ್ಡ್ ಹಾಗೂ ಮನೆ ವಿಳಾಸ, ಮೊಬೈಲ್ ಸಂಖ್ಯೆ ಸೇರಿದಂತೆ ಮತ್ತಿತ್ತರ ವಿವರಗಳನ್ನು ಈ ಮೇಲ್ ವಿಳಾಸ mediacellceokarnataka@gmail.com ಗೆ ಮೇ 15ರ ಸಂಜೆ 5 ಗಂಟೆಯೊಳಗೆ ಸಲ್ಲಿಸಬಹುದು. ಪ್ರಥಮ ಬಹುಮಾನ 25,000 ರೂ., ದ್ವಿತೀಯ ಬಹುಮಾನ 15,000 ರೂ., ತೃತೀಯ ಬಹುಮಾನ 10,000 ರೂ., ಸಮಾಧಾನಕರ 6,000 ಇದ್ದು ವಿಶೇಷ ಬಹುಮಾನ ವಿಶೇಷ 5000 ರೂ. ಇರುತ್ತದೆ. ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಹವ್ಯಾಸಿ ಛಾಯಾಗ್ರಾಹಕರಿಗೆ ಮಾತ್ರ ಈ ಸ್ಪರ್ಧೆಯಲ್ಲಿ ಅವಕಾಶವಿರುತ್ತದೆ.

---

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 142 /2024**

Between: 1.M. Shekharaiah s/o late M.Veeraiah, aged about 65 years, 2. Smt. H.M.Chandramma D/o late M.Veeraiah, aged about 54 years, 3. Smt. Hiremathada Sharadamma D/o late M.Veeraiah, aged about 53 years, 4. Smt. Gowramma W/o late Mathada Kotraiah, aged about 68 years, 5. Smt. Lalithamma W/o late Veerabhadraiah, aged about 68 years,
Hindu, agriculturist, resident of Hyalya village, Kottur Taluk, vijayanagara District. ........ Petitioner
And
The Tahasildar, Taluk Office, Kottur .... Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner have instituted above petition to get the death certificate of their deceased father by Name M.Veeraiah S/o late Kotraiah was died on 16/09/1998at Hyalya village, in Kottur Taluk, and Vijayanagara District. On the file of the civil Judge & JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 14/05/2024 at 11 A.M. and interested persons are directed to produce all the documents upon which you intended to rely in support of your defence.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 27/04/2024

**By Order of the court**
**Chief Ministerial Officer**
**Civil Judge (J.D) Court at Kudligi**

**Sri. Swaroopananda Naik.L., Advocate, Kudligi**

---

**IN THE COURT OF THE CIVIL JUDGE AND J.M.F.C. AT KUDLIGI**
**Crl. Misc. No. 141 /2024**

Between: 1. M. Shekharaiah s/o late M.Veeraiah, aged about 65 years, 2. Smt. H.M.Chandramma D/o late M.Veeraiah, aged about 54 years, 3. Smt. Hiremathada Sharadamma D/o late M.Veeraiah, aged about 53 years, 4. Smt. Gowramma W/o late Mathada Kotraiah, aged about 68 years, 5. Smt. Lalithamma W/o late Veerabhadraiah, aged about 68 years, Hindu, agriculturist, resident of Hyalya village, Kottur Taluk, vijayanagara District.
........ Petitioner And
The Tahasildar Taluk Office, Kottur
........ Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioner have instituted above petition to get the death certificate of their deceased mother by Name M.kotramma w/o late M.Veeraiah was died on 10/06/1977at Hyalya village, in Kottur Taluk, and Vijayanagara District. On the file of the civil Judge & JMFC at Kudligi. The Tahasildar Kottur is the respondent. The interested person are hereby summoned to appear in this court in person or by pleader duly instructed and able to answer all material question relating to the above petition on 14/05/2024 at 11 A.M. and interested persons are directed to produce all t¬he documents upon which you intended to rely in support of your defence.
Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 27/04/2024.

**By Order of the court**
**Chief Ministerial Officer**
**Civil Judge (J.D) Court at Kudligi**

**Sri. Swaroopananda Naik.L., Advocate, Kudligi**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA